INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,15-33
Peer Reviewed Journal, Referred Journal

# "ಪ್ರೊ. ಜಿ.ಅಬ್ದುಲ್ ಬಷೀರ್ ಅವರ ಧರ್ಮಸಮನ್ವಯ ಸಾಹಿತ್ಯ" ಕೃತಿಯ ಆಂತರ್ಯ

ಬಸವರಾಜು ಸಿ.[1]

ಈ ಶತಮಾನದ ಅತಿಶ್ರೇಷ್ಠ ಸಹೃದಯ, ಸಮಾಜವಾದಿ ಚಿಂತಕ ಮತ್ತು ಲೇಖಕರಾದ ಪ್ರೊ.ಜಿ. ಅಬ್ದುಲ್ ಬಷೀರ್ ಅವರು. ಇವರು ಅನೇಕ ದಶಕಗಳಿಂದ ಕನ್ನಡನಾಡು ನುಡಿಗಳಿಗೆ ಸಲ್ಲಿಸುತ್ತಿರುವ ಸೇವೆ ಅಮೋಘವೂ ಅಪೂರ್ವವೂ ಆಗಿದೆ. ಅತ್ಯಂತ ಮಾನವೀಯ ಜನಪರ ಕಾಳಜಿಯಿರುವ ಇವರು ಹಿಂದು ಮುಸ್ಲಿಂ ಸಾಮರಸ್ಯದ ಒಂದು ಸೇತುವೆಯಾಗಿಯೂ ಅತ್ಯುತ್ತಮ ಮಾದರಿಯಾಗಿಯೂ ಪ್ರಸ್ತುತರಾಗುತ್ತಾರೆ.

'ಪ್ರೊ. ಅಬ್ದುಲ್ ಬಷೀರ್ ಅವರ "ಧರ್ಮ ಸಮನ್ವಯ ಸಾಹಿತ್ಯ ವಿಮರ್ಶೆ" ಒಂದು ಯುಗಮಾನದ ಅತ್ಯುತ್ತಮ ಪ್ರಾತಿನಿಧಿಕ ಕೃತಿಯಾಗಿದೆ. ಇದು ಅನೇಕ ಪೂವಾಗ್ರಹ ಪೀಡಿತ ಚಿಂತನೆಯ ಪದರಗಳನ್ನು ಕರಗಿಸಿ ಜಾಗೃತಿಯ ಅರಿವನ್ನು ಮೂಡಿಸುವ ಕೃತಿಯಾಗಿದೆ. ಸಾಹಿತ್ಯದ ನಿಜವಾದ ಗುರಿಯೇನು ಎನ್ನುವುದನ್ನು ಸಾಧಿಸುವ ನಿಟ್ಟಿನಲ್ಲಿ ಈ ಕೃತಿಯ ಆಶಯಗಳು ಪ್ರವರ್ತಿಸಿವೆಯನ್ನುವುದು ನನ್ನ ಬಲವಾದ ನಂಬಿಕೆ. ಜಗತ್ತಿನಲ್ಲಿ ವಿಭಿನ್ನ ಮತಧರ್ಮ, ಜಾತಿಧರ್ಮಗಳು ಆಚರಣೆಯಲ್ಲಿದ್ದರೂ ಮೂಲಭೂತವಾಗಿರುವುದು ಒಂದೇ ಧರ್ಮ. ಅದೇ ನಿಜವಾದ ಮಾನವಧರ್ಮ. ಅದಕ್ಕೆ ಯಾವುದೇ ಜಾತಿ ಮತಗಳ ಬೇಲಿ ಇರುವುದಿಲ್ಲವೆಂಬ ಯಥಾರ್ಥ ಸತ್ಯವನ್ನು ಇಲ್ಲಿನ ಲೇಖನಗಳು ಅನಾವರಣ ಮಾಡುತ್ತವೆ.

ಭಾರತೀಯ ಸಂಸ್ಕೃತಿಯ ಸನಾತನ ಮೌಲ್ಯಗಳ ಅಪಮೌಲೀಕರಣದಿಂದ ಉಂಟಾದ ಸಮಸ್ಯೆ, ಗೊಂದಲಗಳನ್ನು ಪ್ರಶ್ನಿಸುತ್ತ ಅವುಗಳ ಪ್ರಸ್ತುತತೆ ಹಾಗೂ ಕಾರ್ಯಪ್ರವೃತ್ತಿಗಳನ್ನು ವಿರೋಧಿಸುತ್ತ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವುದರ ಮೂಲಕ ಸಂಸ್ಕೃತಿ, ಧರ್ಮಗಳನ್ನು ಎತ್ತಿ ಹಿಡಿಯುವ ದಿಸೆಯಲ್ಲಿ ಕಂಕಣಬದ್ಧರಾದ ಹಿಂದೂ ಮುಸ್ಲಿಂ ಸಂತರು, ಪ್ರವಾದಿಗಳು, ಸಮಾಜ ಸುಧಾರಕರು

[1].ಸಂಶೋಧಕರು, ಕನ್ನಡ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

ಕಾಲಕಾಲಕ್ಕೆ ಬೋಧಿಸಿದ ತತ್ತ್ವಗಳೇನು, ಸಾಧಿಸಿದ ಕಾರ್ಯಗಳೇನು ಎಂಬ ಪ್ರಶ್ನೆಗೆ ಈ ಕೃತಿ ಸಮರ್ಪಕವಾದ ಉತ್ತರವನ್ನು ನೀಡುತ್ತದೆ.

ಇದೊಂದು ವಿಮರ್ಶಾ ಸಂಕಲನವಾಗಿದ್ದು ಇವುಗಳಲ್ಲಿ ಹೆಚ್ಚಿನವು ಬೇರೆ ಬೇರೆ ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳಾಗಿವೆ ಇದರಲ್ಲಿ ವಚನಸಾಹಿತ್ಯ, ಹರಿದಾಸಸಾಹಿತ್ಯ ಮತ್ತು ತತ್ತ್ವ ಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವ ವಿಭಿನ್ನ ಲೇಖನಗಳಿದ್ದರೂ ಶಿವಶರಣರು ಮತ್ತು ಮುಸಲ್ಮಾನ ಸಂತರು ಸಾರಿದ ಸಮಾಜಮುಖೀ ಧೋರಣೆಗಳ ತೌಲನಿಕ ಅಧ್ಯಯನಕ್ಕೆ ಮಹತ್ವವನ್ನು ಕೊಡಲಾಗಿದೆ. ಪ್ರತಿಯೊಂದು ಲೇಖನದ ಕೊನೆಯಲ್ಲೂ ಆಧಾರಕೃತಿಗಳ ಪಟ್ಟಿಕೆಯನ್ನು ನೀಡಿದ್ದು ಹೆಚ್ಚಿನ ಮಾಹಿತಿಗಳನ್ನು ಅರಿಯಬಯಸುವ ಓದುಗರಿಗೆ ತುಂಬ ಅನುಕೂಲವಾಗಿದೆ. ಸಹೃದಯ ವಿಮರ್ಶೆಯಿಂದ ಕೂಡಿದ ಇಲ್ಲಿನ ಎಲ್ಲ ಲೇಖನಗಳೂ ವೈಚಾರಿಕ ಚಿಂತನೆಗಳಿಂದಲೂ ವಿಫುಲವಾದ ಮಾಹಿತಿಗಳಿಂದಲೂ ಉತ್ಕೃಷ್ಟವಾಗಿವೆ. ಇದರಲ್ಲಿ ಕೊಂಡಗುಳಿ ಕೇಶಿರಾಜನಿಂದ ಸರ್ವಜ್ಞನವರೆಗಿನ 25 ಲೇಖನಗಳಿದ್ದು ಸುಮಾರು ಎಂಟು ಲೇಖನಗಳು ಇಸ್ಲಾಂ ಧರ್ಮ ಸಂಬಂಧವಾಗಿದ್ದರೆ ಉಳಿದ ಲೇಖನಗಳಲ್ಲಿ ವಚನ ವಾಙ್ಮಯ ಹಾಗೂ ಹರಿದಾಸ ಸಾಹಿತ್ಯಕ್ಕೆ ಪ್ರಾಶಸ್ತ್ಯವನ್ನು ನೀಡಲಾಗಿದೆ.

**ವಚನ ಸಾಹಿತ್ಯದ ಮುಂಗೋಳಿ ಕೊಂಡಗುಳಿ ಕೇಶಿರಾಜ**

ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ಒಂದು ಪ್ರತ್ಯೇಕವಾದ ಮನ್ನಣೆಯಿದೆ. ಇದು ಹೊಸ ದೃಷ್ಟಿಯಿಂದ ಹೊಸ ಬಗೆಯಿಂದ ಜನಮನವನ್ನು ಆಕರ್ಷಿಸಿದ ಪ್ರಕಾರವಾಗಿದ್ದು ವಿಶ್ವಸಾಹಿತ್ಯಕ್ಕೆ ಕನ್ನಡದ ಹೆಮ್ಮೆಯ ಕೊಡುಗೆಯೆಂಬ ಮಾನ್ಯತೆಯನ್ನು ಪಡೆದಿದೆ. ಜನಪರವಾದ ನಿಲುವುಗಳಿಂದ ಆವಿರ್ಭವಿಸಿದ ಈ ಸಾಹಿತ್ಯಭಾಷೆಯನ್ನು ಆಡುನುಡಿಯಾಗಿ, ಆಡುನುಡಿಯನ್ನು ಸಾಹಿತ್ಯಭಾಷೆಯಾಗಿ ಪರಿವರ್ತಿಸಿದ ವಿಶಿಷ್ಟ ಸಾಹಿತ್ಯ. ಇದರ ರಚನಕಾರರು ಶಿವಭಕ್ತರು, ರಾಜಾಶ್ರಯವನ್ನು ಧಿಕ್ಕರಿಸಿ ಸಮಾಜದ ಅಸಮಾನತೆಯನ್ನು ಪ್ರಶ್ನಿಸಿ ಸರ್ವಸಮಾನತಾ ದೃಷ್ಟಿಯಿಂದ ರಚಿಸಲಾದ ಈ ಸಾಹಿತ್ಯ ವರ್ಗ, ವರ್ಣ, ಲಿಂಗಭೇದವನ್ನು ದೂರಮಾಡುವ ಉದ್ದೇಶದಿಂದಲೂ ಪ್ರಸ್ತುತವಾಗುತ್ತದೆ. 12ನೆಯ ಶತಮಾನದ ಪೂರ್ವಾರ್ಧದಲ್ಲಿ ಜನಪರ ನಿಲುವುಗಳಿಂದ ಸಮಾಜೋಧಾರ್ಮಿಕ ಚಳುವಳಿಯನ್ನು ಮಾಡಿದವರಲ್ಲಿ ಬಸವಣ್ಣ ಅಗ್ರಗಣ್ಯನಾಗಿದ್ದರೆ ಅವನಿಗಿಂತ ಮೊದಲು ಈ ವೈಚಾರಿಕ ಚಿಂತನೆಗಳನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸಿದವರಲ್ಲಿ ಜೇಡರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ ಮುಂತಾದ ಕೆಲವರ ಉಲ್ಲೇಖಗಳು ಕಂಡುಬರುತ್ತವೆ. ಅವರಲ್ಲಿ ಕೊಂಡಗುಳಿಯ ಕೇಶಿರಾಜನೆಂಬುವನು ಅಗ್ರಗಣ್ಯನಾಗುತ್ತಾನೆಂದೂ ಈತ ವಚನಸಾಹಿತ್ಯದ ಮುಂಗೋಳಿಯೆಂದೂ ಲೇಖಕರು ಅಭಿಪ್ರಾಯ ಪಡುತ್ತಾರೆ.

ಚರಿತ್ರೆಯಲ್ಲಿಯೂ ಸಾಹಿತ್ಯದಲ್ಲಿಯೂ ಅಸ್ಪಷ್ಟವಾಗಿರುವ ಈತನ ಚಹರೆ ಮತ್ತು ಸಾಧನೆಗಳಿಗೆ ಬೆಳಕನ್ನು ಚೆಲ್ಲಿ, ನಿಖರವಾದ ಶೋಧನೆಯ ಮೂಲಕ ಅವನ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ತಾಳುವ ಮಹತ್ವಪೂರ್ಣ ವಿಚಾರ ಪ್ರಸ್ತುತ ಲೇಖನದಲ್ಲಿದೆ. ಕೇಶಿರಾಜನ ಕಾಲ, ದೇಶ, ಬದುಕು ಮುಂತಾದ ವಿವರಗಳನ್ನು ಶಾಸನಗಳಿಂದಲೂ, ಇತರ ವಚನಕಾರರ ವಚನಗಳ ಆಧಾರದಿಂದಲೂ, ಕವಿಗಳ ಉಲ್ಲೇಖಗಳಿಂದಲೂ ಸಂಗ್ರಹಿಸಲಾಗಿದೆಯೆಂದು ಲೇಖಕರು ತಿಳಿಸಿದ್ದಾರೆ.

ಕೊಂಡಗುಳಿ ಕೇಶಿರಾಜ ಶಿವನ ವೇಳೆವಾಳಿಯವನಾಗಿದ್ದು ಶಿವನಿಗಾಗಿ ಪ್ರಾಣವನ್ನು ತ್ಯಜಿಸಲು ಸಿದ್ಧನಾಗಿದ್ದ ವೀರಶೈವನಾಗಿದ್ದ. ಶಾಸನಗಳ ಹಾಗೂ ಜೇಡರ ದಾಸಿಮಯ್ಯನಿಂದ ಮೊದಲ್ಗೊಂಡು, ಹರಿಹರ, ರಾಘವಾಂಕ ಕವಿಗಳವರೆಗೂ ಅನೇಕ ವಚನಕಾರರೂ ಕವಿಗಳೂ ಈತನನ್ನು ಸ್ಮರಿಸಿರುವ ಸಾಕ್ಷ್ಯಾಧಾರಗಳಿಂದ ಈತ ಸಮಾಜೋಧಾರ್ಮಿಕ ಚಳುವಳಿಗೂ ಭಕ್ತಿಸಾಹಿತ್ಯಕ್ಕೂ, ವೀರಶೈವಧರ್ಮದ ತಾತ್ತ್ವಿಕ ತಳಹದಿಗೂ, ಮೂಲಸೆಲೆಯೆಂಬುದನ್ನು ಗುರುತಿಸುವ ಲೇಖಕರು ಈತ ಆ ಕಾಲದ ಬಹುದೊಡ್ಡ ಕವಿಯಾಗಿರಬೇಕೆಂಬ ಅಂಶವನ್ನು ದಾಖಲಿಸುತ್ತಾರೆ.

ಈತನ ಕಾಲ ಕ್ರಿ.ಶ. ಸುಮಾರು 1100 ಆಗಿರಬಹುದೆಂದೂ ಈತನ ಊರಾದ ಕೊಂಡಗುಳಿ ಹೆಸರಾಂತ ಅಗ್ರಹಾರಗಳಲ್ಲಿ ಒಂದಾಗಿತ್ತೆಂದೂ ಅಭಿಪ್ರಾಯ ಪಡುತ್ತಾರೆ. ಈ ಊರು ಬಿಜಾಪುರ ಜಿಲ್ಲೆಯ ಡೋಣಿ ಕೊಂಡಗುಳಿ ಎನ್ನುವುದನ್ನು ಖಚಿತಪಡಿಸುತ್ತಾರೆ. ಈತನ ಹೆತ್ತವರು ನಿಂಬಣಯ್ಯ ಮತ್ತು ಗಂಗಾದೇವಿಯೆಂದೂ ತಂದೆ ನಿಂಬಣಯ್ಯ ಆರನೆಯ ವಿಕ್ರಮಾದಿತ್ಯನಲ್ಲಿ ಮಹಾದಂಡಾಧಿಪತಿಯಾಗಿದ್ದನೆಂದೂ ಕೇಶಿರಾಜನೂ ತಂದೆಯಂತೆಯೇ ಮಹಾಮಹಿಮೆಯುಳ್ಳ ದಂಡನಾಯಕನಾಗಿದ್ದು, ಅಪಾರ ಜನಾನುರಾಗಿಯೂ ಆಗಿದ್ದನೆಂಬುದನ್ನು ಪ್ರಸ್ತುತಪಡಿಸುತ್ತಾರೆ.

ಯಾವುದೋ ಕ್ಷುಲ್ಲಕ ರಾಜಕೀಯ ಕಿತಾಪತಿಯಿಂದ ಬೇಸತ್ತು ಸಂಸಾರ ಸಮೇತ ರಾಜ್ಯವನ್ನು ತೊರೆದ ಕೇಶಿರಾಜ ಶಿವಪುರವೆಂಬ ಊರಿನಲ್ಲಿ ನೆಲಸಿ ಜಂಗಮ ದಾಸೋಹ, ಶಿವಶರಣರ ಸಮಾಗಮ, ಶಿವಸ್ತುತಿಯನ್ನು ಮಾಡುತ್ತ ಶೇಷಜೀವಿತವನ್ನು ಕಳೆದನೆಂಬ ಅಂಶವನ್ನು ಉಲ್ಲೇಖಿಸುತ್ತ ಬಸವಪೂರ್ವದಲ್ಲಿ ಹೀಗೆ ವೈಯಕ್ತಿಕ ಮಟ್ಟದಲ್ಲಿ ಶಿವಭಕ್ತಿ ಪಾರಮ್ಯವೂ ಶಿವಧರ್ಮವೂ ಪ್ರಚಾರವಾಗುತ್ತಿದ್ದುದರಿಂದಲೇ ಕೇಶಿರಾಜನನ್ನು ವಚನ ವಾಙ್ಮಯದ ಮುಂಗೋಳಿ ಎನ್ನಬಹುದು ಎಂದು ಅಭಿಪ್ರಾಯಪಡುತ್ತಾರೆ.

ಲೇಖನದ ಉತ್ತರಾರ್ಧದಲ್ಲಿ ಕೇಶಿರಾಜನು ರಚಿಸಿದ ಮಂತ್ರ ಮಹತ್ವದ ಕಂದ, ಶೀಲಮಹತ್ವದ ಕಂದ, ಕೇಶಿರಾಜ ದಣಾಯಕರ ಕಂದ, ಅಳಲಾಷ್ಟಕ, ನವರತ್ನಮಾಲಾ, ಲಿಂಗಸ್ತೋತ್ರದ ಕಂದ–1, ಲಿಂಗಸ್ತೋತ್ರದ

ಕಂದ–2, ಮುಂತಾದ ಕೃತಿಗಳ ಅವಲೋಕನ ಹಾಗೂ ಇತರ ಕವಿ, ವಚನಕಾರರ ಮೇಲೆ ಕೇಶಿರಾಜನ ಪ್ರಭಾವವನ್ನು ಗುರುತಿಸುವ ಪ್ರಯತ್ನವಿದೆ.

ಮಂತ್ರಮಹತ್ವದ ಕಂದ ಸುಂದರ ಶತಕ ಕಾವ್ಯವೆನ್ನುತ್ತ ಬಷೀರ್ ಅವರು ಕೆಲವು ಸಮರ್ಥನೀಯವಾದ ಉದಾಹರಣೆಗಳನ್ನು ನೀಡುತ್ತಾರೆ. ಇದು ಮುಂದೆ ಬಂದ ಹರಿಹರ, ಪಾಲ್ಕುರಿಕೆ ಸೋಮನಾಥರಿಗೂ, ಮಾದರಿಯಾಯ್ತು ಎಂಬುದನ್ನೂ ತಿಳಿಸುತ್ತಾರೆ. ಸರಳ ಭಾಷೆಯಲ್ಲಿ ಸುಂದರ ಶೈಲಿಯಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ನಿರೂಪಿಸಲಾದ ಈ ಶತಕ ಭಾವಗೀತಾತ್ಮಕವಾದ ರೀತಿಯಲ್ಲಿ ಅಭಿವ್ಯಕ್ತಗೊಂಡಿರುವುದು ಇದರ ವಿಶೇಷವೆನ್ನುತ್ತಾರೆ.

101 ಕಂದಪದ್ಯಗಳಿರುವ ಶೀಲ ಮಹತ್ವ ಕಂದವೆಂಬ ಕೃತಿಯೂ ಶತಕವೇ ಆಗಿದ್ದು ಇದರಲ್ಲಿ ಕೇಶಿರಾಜ ಅಂತರಂಗ, ಬಹಿರಂಗ ಶುದ್ಧವಾಗಿರಲು ಅನುಸರಿಸಬೇಕಾದ ಗುಣಶೀಲಗಳನ್ನು ವಿವರಿಸಿದ್ದಾನೆನ್ನುವ ಬಷೀರ್ ಅವರು ಇದರಲ್ಲಿ 20ನೆಯ ಶತಮಾನದ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳಿಗೆ ನಿಕಟವಾಗಬಲ್ಲ ಅನೇಕ ಅಂಶಗಳು ಗೋಚರಿಸುತ್ತವೆ ಎನ್ನುತ್ತಾರೆ. 'ವೈದಿಕ ಆಚಾರ ವಿಚಾರಗಳನ್ನು ಖಂಡಿಸುತ್ತ ಅವುಗಳು ಮೂಢ ನಂಬಿಕೆಗಳನ್ನು ಬೆಳೆಸುತ್ತವೆಂದೂ ಯಾವ ಕಾಯಕವನ್ನೇ ಮಾಡಲಿ ಅದು ದೇವರ ಸುಖಕ್ಕೆ ಸವೆಸಬೇಕೆಂದೂ ಯಾವ ಸೇವೆಯನ್ನು ಮಾಡಿದರೂ ಅದು ಪರಮಾತ್ಮನದಾಗಿರಬೇಕೆಂದೂ ಹೇಳುವ ಕೇಶಿರಾಜನ ಮಾತುಗಳು ಕಾಯಕ ಹಾಗೂ ಅದರ ಪಾವಿತ್ರ್ಯದ ಬಗೆಗೆ ನೀಡಿರುವ ವ್ಯಾಖ್ಯಾನವಾಗಿದೆ ಎನ್ನುವ ವಿಚಾರ ಗಮನಾರ್ಹವಾಗಿದೆ. ವೀರಶೈವ ಧರ್ಮದ ಅರವತ್ತನಾಲ್ಕು ಶೀಲಗಳನ್ನು ನಿರೂಪಿಸುವ ಈ ಗ್ರಂಥ ಕನ್ನಡದ ಮೊದಲ ಗ್ರಂಥವೆಂದೂ ಬಸವಪೂರ್ವ ಯುಗದಲ್ಲಿ ಇಂಥ ಉದಾತ್ತ ವಿಚಾರಗಳು ಅನುಷ್ಠಾನದಲ್ಲಿದ್ದುದಕ್ಕೆ ಇದು ಸಾಕ್ಷಿಯಾಗಿದೆಯೆಂದೂ ಲೇಖಕರು ಅಭಿಪ್ರಾಯಿಸುತ್ತಾರೆ.

ಕೇಶಿರಾಜ ಡಣಾಯಕರ ಕಂದ ಎಂಬ ಕೃತಿಯ 250 ಕಂದಪದ್ಯಗಳಲ್ಲಿ 111 ಪದ್ಯಗಳು ಮಾತ್ರವೇ ಪ್ರಕಟವಾಗಿದ್ದು ಅವುಗಳಲ್ಲಿ ಕರ್ತೃ ತನ್ನ ಶಿವಭಕ್ತಿ ಹಾಗೂ ಮಾನಸಿಕ ತೊಳಲಾಟವನ್ನು ಮುಕ್ತ ಮನಸ್ಸಿನಿಂದ ಅಭಿವ್ಯಕ್ತಿಸಿರುವುದನ್ನು ಲೇಖಕರು ಗುರುತಿಸಿದ್ದಾರೆ. ಆರ್ದ್ರಮನಸ್ಸಿನ ಭಾವನೆಗಳನ್ನು ಸೊಗಸಾದ ಉಪಮೆಗಳ ಮೂಲಕ ಬಿಚ್ಚಿಡುವ ಕವಿ ಮನಸ್ಸಿನ ತಹತಹವು ಇಲ್ಲಿ ಔಚಿತ್ಯಪೂರ್ಣವಾಗಿ ಬಂದಿದೆಯೆನ್ನುವುದು ಲೇಖಕರ ಸಹೃದಯ ವಿಮರ್ಶನ ಪ್ರಜ್ಞೆಗೆ ದ್ಯೋತಕವಾಗಿದೆ.

ಅಳಲಾಷ್ಟಕ ಒಂಬತ್ತು ಪದ್ಯಗಳ ಕೃತಿ. ಅಳಲು ಎಂದರೆ ದುಃಖ, ಅಷ್ಟಕ ಎಂದರೆ ಎಂಟು. ಶೀರ್ಷಿಕೆಯ ಅರ್ಥ ಶಿವಪಾರಮ್ಯವಾದ ಎಂಟು ಪದ್ಯಗಳಿಗೆ ಅನ್ವಯಿಸುವಂತಿರುವುದರಿಂದ ಕೊನೆಯ ಪದ್ಯ ಪ್ರಕ್ಷಿಪ್ತವಾಗಿರಬೇಕೆಂದು ಅನುಮಾನಿಸಿರುವುದು ಲೇಖಕರ ಸಂಶೋಧಕ ಮತಿಯನ್ನು ದಿಗ್ದರ್ಶಿಸುತ್ತದೆ.

ಕೃತಿಯ ಪ್ರತಿ ಪದ್ಯವೂ 'ಎನ್ನಳಲಾರ್ದಪುದೇ' ಎಂದು ಮುಕ್ತಾಯವಾಗುತ್ತದೆ. ಶಿವಸ್ತುತಿಗೆಂದೇ ಮೀಸಲಾದ ಈ ಪದ್ಯಗಳಲ್ಲಿ ತೀಕ್ಷ್ಣತೆಯಿದೆ, ಖಾರವಿದೆ. ಅನ್ಯಮತ ವಿಡಂಬನೆಯಿದೆ. ಆದ್ದರಿಂದ ಇದನ್ನು ಕವಿ ಯೌವ್ವನದ ಉತ್ಸಾಹದಲ್ಲಿ ರಚಿಸಿರಬೇಕೆಂದು ಊಹಿಸಿರುವುದು ಕೂಡ ತರ್ಕಬದ್ಧವಾಗಿದೆ.

ನವರತ್ನಮಾಲಾ ಎಂಬ ಕೃತಿಯಲ್ಲಿ ಒಂಬತ್ತು ಅಕ್ಷರ ವೃತ್ತಗಳಿದ್ದು ಪ್ರತಿವೃತ್ತವೂ 'ಕಂಡೆರ್ದೆ ದಣಿದು ಕುಳಿರ್ಕೋಣಡಿತೆನ್ನಂತರಂಗಂ' ಎಂದು ಅಂತ್ಯವಾಗುತ್ತದೆ. ಮಹಾಸ್ರಗ್ಧರೆಯಲ್ಲಿರುವ ಈ ಪದ್ಯಗಳ ಭಾಷೆ ಸಂಸ್ಕೃತಭೂಯಿಷ್ಠವಾಗಿದ್ದು ಶಿವಸ್ತುತಿ ಹಾಗೂ ಅಂತರಂಗದ ತಳಮಳ ಮತ್ತು ಸಮಾಧಾನ ಚಿತ್ತದ ವರ್ಣನೆಯಿಂದ ಕೂಡಿ ಅವುಗಳ ಅಂತರಂಗದಲ್ಲಿ ದಟ್ಟಭಕ್ತಿ ಮಡುಗಟ್ಟಿ ನಿಂತಿದೆಯೆಂದೂ ಈ ಪದ್ಯಗಳಲ್ಲಿ ಅಲಂಕಾರಿಕವಾದ ಮಾತುಗಳು ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಕವಿ ತನ್ನ ಅಂತ್ಯಕಾಲದಲ್ಲಿ ಇವುಗಳನ್ನು ರಚಿಸಿರಬೇಕೆಂದು ಲೇಖಕರು ಊಹಿಸುತ್ತಾರೆ.

ಶಿವ ಪ್ರಾರ್ಥನಾ ಶತಕವೆಂಬ ಲಿಂಗಸ್ತೋತ್ರ ಕಂದದ ಮೊದಲ ಭಾಗದಲ್ಲಿ 100 ಪದ್ಯಗಳೂ ಎರಡನೆಯ ಭಾಗದಲ್ಲಿ 108 ಪದ್ಯಗಳೂ ಇದ್ದು ಪದ್ಯಗಳು ಕಲಬೆರಕೆಯಾದಂತೆ ಕಾಣಿಸುತ್ತವೆನ್ನುವ ಲೇಖಕರು ಏಕಾಗ್ರತೆ, ಏಕಾಂತ ಹಾಗೂ ಪ್ರಕೃತಿಯ ತಾಣ ಈ ಕೃತಿಗಳ ತ್ರಿವೇಣಿ ಸಂಗಮವಾಗಿದೆ ಎನ್ನುತ್ತಾರೆ. ಭಕ್ತಿರಸ ಮಡುಗಟ್ಟಿರುವ ಇಲ್ಲಿನ ಕಂದಗಳ ಭಾವತೀವ್ರತೆ, ಭಕ್ತಿ ಕಳಕಳಿ, ಆತ್ಮದೃಷ್ಟಿ, ವಿನಯ, ಆತ್ಮೀಯತೆ, ಪ್ರಾಮಾಣಿಕ ಮನೋಭಾವ, ಭಾಷೆಯ ಸುಭಗತೆಗಳು ಸಹೃದಯರ ಮನ ಸೆಳೆಯುತ್ತವೆನ್ನುತ್ತ ಬಸವಯುಗಾರಂಭದ ಮುನ್ನವೇ ವೀರಶೈವರಲ್ಲಿ ಇಷ್ಟಲಿಂಗವನ್ನು ಅಂಗೈಯಲ್ಲಿ ಇಟ್ಟುಕೊಂಡು ಪೂಜಿಸುವ ವಿಧಾನವು ರೂಢಿಯಲ್ಲಿ ಇದ್ದಿತೆಂದಿರುವುದು ಗಮನಾರ್ಹವಾಗಿದೆ.

ಕೊಂಡಗುಳಿ ಕೇಶಿರಾಜ ಹಾಗೂ ಇತರ ವಚನಕಾರರು ಎಂಬ ಕೊನೆಯ ಭಾಗದಲ್ಲಿ ಬಸವಣ್ಣ, ಚೆನ್ನ ಬಸವಣ್ಣ ಹಾಗೂ ಅಕ್ಕ ಮಹಾದೇವಿಯ ವಚನಗಳೊಂದಿಗೆ ಕೇಶಿರಾಜನ ಪದ್ಯಗಳ ಸಾಮ್ಯತೆಯನ್ನು ಗುರುತಿಸುವುದರ ಮೂಲಕವೂ ಲೇಖಕರು ತಮ್ಮ ಶೋಧಕ ಪ್ರವೃತ್ತಿಯನ್ನು ಮೆರೆದಿದ್ದಾರೆ. ನಿರರ್ಗಳತೆ, ಭಾವ, ಬಂಧ, ಭಾಷೆಗಳಂಥ ಅನೇಕ ಅಂಶಗಳು ಕೇಶಿರಾಜನಿಂದ ಅನಂತರದ ವಚನಕಾರರಿಗೂ ಕವಿಗಳಿಗೂ ನೇರವಾಗಿ ಬಂದಿವೆಯೆನ್ನುವ ಲೇಖಕರು ಕೇಶಿರಾಜನು ಆ ಕಾಲದ ಅತ್ಯಂತ ಪ್ರತಿಭಾವಂತ ಪ್ರಭಾವೀ ವ್ಯಕ್ತಿಯಾಗಿದ್ದನೆಂದೂ, ಸುಮಾರು 500 ಕ್ಕಿಂತಲೂ ಹೆಚ್ಚಿನ ಕಂದಪದ್ಯಗಳನ್ನು, ರಚಿಸಿ, ಲಿಂಗಾಯತ ಧರ್ಮದ ಸ್ವರೂಪವನ್ನು ಖಚಿತಪಡಿಸಿದ್ದಾನೆಂದೂ, ಆತನ ಕೃತಿಗಳ ಸೂಕ್ಷ್ಮಾವಲೋಕನವನ್ನು ಮಾಡಿದರೆ ವೀರಶೈವ ಧರ್ಮದ ಬೇರುಗಳು ಹನ್ನೆರಡನೆಯ ಶತಮಾನಕ್ಕಿಂತ ಮೊದಲೇ ಕಾಣಿಸಿಕೊಂಡಿವೆಯೆಂದೂ ಅತ್ಯಂತ ಮಹತ್ವಪೂರ್ಣ ಮಾಹಿತಿಗಳನ್ನು ಒದಗಿಸುತ್ತಾರೆ.

ಹರಿಹರ ಕವಿ ಕೇಶಿರಾಜ ಡಣಾಯಕನ ರಗಳೆ ರಚಿಸಿದ್ದಾನೆನ್ನುವುದೂ ಕೇಶಿರಾಜನ ಹೆಗ್ಗಳಿಕೆಗೆ ಸಂದ ಕಿರೀಟವಾಗಿದೆ.

**ವಿಶ್ವಮಾನವ ಬಂಧು ಬಸವಣ್ಣ**

ಪ್ರೊ. ಅಬ್ದುಲ್ ಬಷೀರ್ ಅವರು ಬರೆದ ಎರಡನೆಯ ಲೇಖನ ವಿಶ್ವಮಾನವ ಬಂಧು ಬಸವಣ್ಣ ಎಂಬುದು. 12ನೆಯ ಶತಮಾನದ ಕನ್ನಡ ನಾಡಿನ ಸಮಾಜೋಧಾರ್ಮಿಕ ಚಳುವಳಿಯ ಮುಖ್ಯ ನೇತಾರರಾದ ಬಸವಣ್ಣನವರ ವ್ಯಕ್ತಿತ್ವದ ಬಗ್ಗೆ ಅಪಾರವಾದ ಮಾಹಿತಿಗಳನ್ನು ನೀಡುವ ಈ ಲೇಖನ ಬಸವಣ್ಣನವರ ಬಗ್ಗೆ ಅಧ್ಯಯನ ಮಾಡುವವರಿಗೆ ಒಂದು ಅಮೂಲ್ಯ ಆಕರವಾಗಿದೆ. ಬಸವಣ್ಣನವರ ಗುಣ ಸ್ವಭಾವ, ಸಾಧನೆ ಸಿದ್ಧಿಗಳ ವಿಚಾರದಲ್ಲಿ ಅತ್ಯಂತ ಮೆಚ್ಚುಗೆ, ಪ್ರಶಂಸೆಯನ್ನು ವ್ಯಕ್ತಪಡಿಸಿರುವ ಲೇಖಕರು ಅನೇಕ ವ್ಯಕ್ತಿ ವಿಶೇಷಣಗಳ ಮೂಲಕ ಬಸವಣ್ಣನವರನ್ನು ಕೊಂಡಾಡಿದ್ದಾರೆ. ಬಸವಣ್ಣನವರು ಒಂದು ಶಕ್ತಿಯೆಂದೂ, ಒಂದು ಸಂಸ್ಥೆಯೆಂದೂ ಜ್ಞಾನದ ಗಣಿಯೆಂದೂ ತಿಳಿವಿನ ಮೂರ್ತಿಯೆಂದೂ, ಜಗತ್ತಿನ ಸದ್ವಿದ್ಯೆಗಳು, ಸದಿಚ್ಛೆಗಳು, ಸದ್ಗುಣಗಳು, ಸನ್ಮಂಗಳಗಳು, ಸನ್ಮಾನಗಳು ಯಾವುವು ಇರಬಹುದೋ ಅವೆಲ್ಲವುಗಳ ಮೂರ್ತರೂಪವೆಂದೂ ಮನುಕುಲದ ಉದ್ಧಾರಕರೆಂದೂ ಪ್ರಶಂಸಿಸುತ್ತಾರೆ. ಬಸವಣ್ಣನವರ 'ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ' ಎಂಬ ವಚನವನ್ನು ಉಲ್ಲೇಖಿಸುತ್ತ ಬಸವಣ್ಣನವರು ಯಾವುದೇ ಜಾತಿ, ಮತ, ವರ್ಗ, ವರ್ಣ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುವ ಮನೋವೈಶಾಲ್ಯದ ಪ್ರತೀಕವೆಂದು ಕೊಂಡಾಡಿದ್ದಾರೆ.

ಬಸವಣ್ಣನವರ 1425 ಉಪಲಬ್ಧ ವಚನಗಳ ಆಧಾರದಿಂದಲೂ ಇತರ ಕವಿಕೃತಿಗಳ ಆಧಾರದಿಂದಲೂ ಅವರ ಇತಿವೃತ್ತ ಹಾಗೂ ವ್ಯಕ್ತಿತ್ವವನ್ನು ಲೇಖಕರು ಕಂಡರಿಸುತ್ತಾರೆ. ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಶೈವಬ್ರಾಹ್ಮಣ ಮನೆತನದ ಮಾದಿರಾಜ ಮತ್ತು ಮಾದಲಾಂಬಿಕೆಯರ ಮಗನಾದ ಬಸವಣ್ಣನವರು ಚಿಕ್ಕಂದಿನಿಂದಲೂ ಪ್ರಗತಿಪರ ಧೋರಣೆಯುಳ್ಳವರಾಗಿದ್ದರು. ಜಾತೀಯತೆಯನ್ನು ಪೋಷಿಸುವ ವೈದಿಕ ಕರ್ಮಕಾಂಡದಲ್ಲಿ ನಿರಾಸಕ್ತರಾಗಿ ಉಪನಯನ ಸಂಸ್ಕಾರವನ್ನು ತಿರಸ್ಕರಿಸಿ ಕೂಡಲ ಸಂಗಮಕ್ಕೆ ತೆರಳಿದ ಬಸವಣ್ಣನವರು ಶಿವಭಕ್ತರಾಗಿ ಸುಮಾರು ಹನ್ನೆರಡು ವರ್ಷಗಳ ಕಾಲ ತಪಸ್ಸನ್ನಾಚರಿಸಿ ಅನಂತರ ಮಂಗಳವಾಡಕ್ಕೆ ಬಂದು ಕಲ್ಯಾಣದ ಚಾಲುಕ್ಯರ ಸಾಮಂತರಾಜನಾದ ಬಿಜ್ಜಳನ ಬಳಿ ಭಂಡಾರಿಯಾಗಿದ್ದು ವಿವಾಹಿತರಾಗುತ್ತಾರೆ. ಬಿಜ್ಜಳ ಕಲ್ಯಾಣಕ್ಕೆ ರಾಜಧಾನಿಯನ್ನು ಬದಲಾಯಿಸಿದಾಗ ಅವನೊಂದಿಗೆ ಕಲ್ಯಾಣಕ್ಕೆ ಬಂದರೂ ಬಿಜ್ಜಳರಾಜನ ಕೊಲೆಯಾದ ಮೇಲೆ ಪುನಃ ಕೂಡಲಸಂಗಮಕ್ಕೆ ತೆರಳಿ ಲಿಂಗೈಕ್ಯರಾಗುತ್ತಾರೆ. ಈ ವಿಚಾರವನ್ನು ತಿಳಿಸುತ್ತ ಬಸವಣ್ಣನವರಿಗೆ ಲೌಕಿಕಜೀವನದ ಅಧಿಕಾರ, ಪ್ರತಿಷ್ಠೆಗಳಿಗಿಂತ ಜನಸಾಮಾನ್ಯರ ಮಧ್ಯೆ ಜನಸೇವೆ ಮಾಡುತ್ತ ಸರಳವಾಗಿ

ಬದುಕುವುದೇ ಇಷ್ಟವಾಗಿತ್ತೆಂದೂ, ಮಾನವೀಯ ಮೌಲ್ಯಗಳ ಪ್ರತಿಷ್ಠಾಪನೆಗಾಗಿ ಹೋರಾಡುವುದೇ ಗುರಿಯಾಗಿತ್ತೆಂದೂ, ಜಾತೀಯತೆಯ ನಿರ್ಮೂಲನದಲ್ಲಿ ಮೊತ್ತಮೊದಲು ಹೋರಾಟದ ಕಣಕ್ಕಿಳಿದವರು ಬಸವಣ್ಣನವರೆಂದೂ ಲೇಖಕರು ಪ್ರತಿಪಾದಿಸುತ್ತಾರೆ. ಸಿದ್ಧಯ್ಯ ಪುರಾಣಿಕ, ಡಾ.ಚಿದಾನಂದ ಮೂರ್ತಿ ಮುಂತಾದವರ ಹೇಳಿಕೆ ಹಾಗೂ ಸಾಕ್ಷ್ಯಾಧಾರಗಳನ್ನು ಉಲ್ಲೇಖಿಸುವುದರ ಮೂಲಕ ಕನ್ನಡ ಭಾಷೆಯನ್ನೂ ಕನ್ನಡ ಜನರನ್ನೂ ಉದ್ಧರಿಸಿದವರು ಬಸವಣ್ಣನವರೆಂಬ ತಮ್ಮ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಬಸವಣ್ಣನವರ ಸುಪ್ರಸಿದ್ಧ ವಚನದ ಸಾಲನ್ನು ಉದ್ಧರಿಸುತ್ತ ಬಸವಣ್ಣನವರ ಸುಧಾರಿಕ ಮನೋವೃತ್ತಿ, ಪ್ರಗತಿಪರ ನಿಲುವನ್ನು ಎತ್ತಿಹೇಳುವ ಲೇಖಕರು 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯ್ಯುವೆ' ಎಂಬ ಬಸವಣ್ಣನವರ ಮಾತುಗಳ ಮೂಲಕ ಸಮಾಜದಲ್ಲಿ ರೂಢಿಗತವಾಗಿದ್ದ ಅಜ್ಞಾತ, ಅಂಧಶ್ರದ್ಧೆ, ಸಂಪ್ರದಾಯಶರಣತೆ ಡಾಂಭಿಕ ಭಕ್ತಿಗಳನ್ನು ಪ್ರತಿಭಟಿಸಿದ ಮೊದಲ ವ್ಯಕ್ತಿ ಬಸವಣ್ಣನವರೆಂದೂ ಇತರ ವಿಮರ್ಶಕರು ಹೇಳುವಂತೆ ಅವರ ವ್ಯಕ್ತಿತ್ವದಲ್ಲಿ ಬುದ್ಧನ ದಯೆ, ಮಹಾವೀರನ ಸರಳತೆ, ಕ್ರಿಸ್ತನ ಅನುಕಂಪ, ಮುಹಮ್ಮದರ ಕೆಚ್ಚು, ಗಾಂಧಿಯ ಸತ್ಯ, ಅಹಿಂಸೆ, ನಿಷ್ಠೆಗಳು ಸೇರಿವೆ ಎಂದೂ ಅಭಿಪ್ರಾಯ ಪಡುತ್ತಾರೆ.

ಭಕ್ತಿಭಂಡಾರಿಯಾದ ಬಸವಣ್ಣನವರು ಆತ್ಮಶೋಧನೆ, ಅಂತರಂಗ ಶುದ್ಧಿ, ಸದಾಚಾರಗಳಿಗೆ ಮಹತ್ವದ ಸ್ಥಾನವನ್ನು ನೀಡಿದ್ದಾರೆಂದು ಹೇಳುತ್ತ ಬಸವಣ್ಣನವರ ಕಾಯಕತತ್ತ್ವ, ಸಾಮಾಜಿಕ ಕಾಳಜಿ, ಸಮಾನತಾವಾದಗಳನ್ನು ಎತ್ತಿಹಿಡಿಯುತ್ತಾರೆ. ವೇದೋಪನಿಷತ್ತುಗಳ ಬಗ್ಗೆ ಅಪಾರ ಪಾಂಡಿತ್ಯವುಳ್ಳವರಾಗಿದ್ದರೂ ಆ ದಾರಿಯಲ್ಲಿ ಸಾಗಿ ದೇವರನ್ನು ಒಲಿಸುವುದು ಸಾಮಾನ್ಯಜನವರ್ಗಕ್ಕೆ ಅಸಾಧ್ಯವಾಗಿರುವ ಪರಿಸ್ಥಿತಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿದ ಬಸವಣ್ಣನವರು ದೇವಾಲಯವನ್ನೇ ನಿರಾಕರಿಸುತ್ತಾರೆ. 'ಉಳ್ಳವರು ಶಿವಾಲಯ ಮಾಡುವರಯ್ಯ' ಎಂಬ ಪ್ರಸಿದ್ಧ ವಚನದ ಮೂಲಕ ಪರಿಶುದ್ಧವಾದ ಭಕ್ತಿಯಿದ್ದರೆ ದೇವರನ್ನು ಒಲಿಸಬಹುದೆಂಬುದನ್ನು ಜನರಿಗೆ ತೋರಿಸಿಕೊಟ್ಟ ಈ ವಚನ ಬಸವಣ್ಣನವರ ದಲಿತಪ್ರಜ್ಞೆಗೂ ಬಂಡಾಯ ಪ್ರವೃತ್ತಿಗೂ ಸೊಗಸಾದ ನಿದರ್ಶನವಾಗಿಯೆಂದೂ, ವರ್ಗರಹಿತ, ವರ್ಣರಹಿತ, ಸಮಾನ ಮನೋಭಾವನೆಗಳನ್ನೊಳಗೊಂಡ ಆದರ್ಶ ಸಮಾಜ ರಚನೆಯ ಉದ್ದೇಶ ಬಸವಣ್ಣನವರದಾಗಿತ್ತೆಂದೂ ಹೇಳಿರುವುದು ತುಂಬ ಸಮಂಜಸವಾಗಿದೆ.

ಬಸವಣ್ಣ ಅವರ ದೃಷ್ಟಿಯಲ್ಲಿ ಭಕ್ತ ಮತ್ತು ಭವಿ ಎರಡೇ ಜಾತಿ. ಶಿವನನ್ನು ನಂಬಿದವರು ಭಕ್ತರು. ಅನ್ಯದೈವಗಳನ್ನು ಪೂಜಿಸುವವರು ಭವಿಗಳು. ಆದ್ದರಿಂದ ಹಾರುವ ಮೊದಲಾಗಿ ಅಂತ್ಯಜನವರೆಗೆ ಎಲ್ಲರನ್ನೂ ಶಿವಶರಣರನ್ನಾಗಿ ಮಾಡಿ ಅವರನ್ನು ಒಂದೇ ಕುಲಜರೆನ್ನುವ ಪ್ರಯತ್ನವನ್ನು ಮಾಡಿದ

ಬಸವಣ್ಣನವರು ತಮ್ಮ ಧ್ಯೇಯೋದ್ದೇಶಗಳನ್ನು ಒಪ್ಪದವರನ್ನು ಭವಿಗಳೆಂದು ನಿರ್ಲಕ್ಷಿಸಿದರು. ಅವರದು ಒಂದು ರೀತಿಯಲ್ಲಿ ಹೋರಾಟದ ಬದುಕಾಗಿತ್ತು. ಆ ಹೋರಾಟ ತಮ್ಮ ಮನಸ್ಸಿನೊಂದಿಗೆ, ಜಾತಿಕಲ್ಪನೆಯೊಂದಿಗೆ, ರಾಜಶಾಹಿಯೊಡನೆ, ಅಸಮಾನತೆಯೊಡನೆ ಆಗಿತ್ತು ಎಂಬುದು ಲೇಖಕರ ಅಭಿಪ್ರಾಯ.

ಬಸವಣ್ಣ ಅವರ ವಚನಗಳು ತುಂಬ ಜನಪ್ರಿಯವಾಗಿದ್ದು ಅವುಗಳಲ್ಲಿ ತುಂಬಿರುವ ಸಾಹಿತ್ಯದ ಸೊಗಸು ಅಪೂರ್ವವಾಗಿದೆಯೆಂದೂ ನೂರಾರು ಉಪಮಾಲಂಕಾರಗಳನ್ನು ತುಂಬ ಸಹಜವಾಗಿ ವಿಚಾರ ಸ್ಪಷ್ಟತೆಗಾಗಿ, ಅರ್ಥಪುಷ್ಟಿಗಾಗಿ ಬಳಸಿದ್ದಾರೆಂದೂ, ಈ ಬಗೆಯ ವೈವಿಧ್ಯಮಯ ಉಕ್ತಿಗಳು ಬೇರಾವ ಕನ್ನಡ ಕವಿಯಲ್ಲಿಯೂ ಬಂದಿಲ್ಲವೆಂದೂ ಪ್ರಶಂಸಿಸುತ್ತ ಅನೇಕ ದೃಷ್ಟಾಂತಗಳನ್ನು ಉದ್ಧರಿಸುವುದರ ಮೂಲಕ ತಮ್ಮ ಅಭಿಪ್ರಾಯವನ್ನು ಸಮರ್ಥಿಸುವ ಲೇಖರು ಉಪಮೆ, ಉತ್ಪ್ರೇಕ್ಷೆ, ರೂಪಕ, ಪ್ರತಿಮೆ, ವಿರೋಧಾಭಾಸ, ಹಾಸ್ಯ, ಶ್ಲೇಷೆ ವ್ಯಂಗ್ಯ, ದೃಷ್ಟಾಂತ, ಕಟಕಿ, ಪ್ರಾಸಾನುಪ್ರಾಸ, ನಾಟಕೀಯ ನುಡಿಚಿತ್ರಗಳು ತುಂಬಿರುವ ವಚನಗಳು ಬಸವಣ್ಣನವರು ಒಬ್ಬ ಉತ್ಕೃಷ್ಟ ಕವಿಯೆಂಬುದನ್ನು ಸಾಬೀತುಪಡಿಸುತ್ತವೆ ಎನ್ನುತ್ತಾರೆ.

'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂಬ ವಚನವನ್ನು ಉಲ್ಲೇಖಿಸುತ್ತ ಮನೆಯೊಳಗೆ ಮನೆಯೊಡೆಯನಿಲ್ಲದ' ಮನೆಯ ಚಿತ್ರ ಮಾನವ ಮನಸ್ಸಿನ ರಿಕ್ತಸ್ಥಿತಿಯ ಸುಂದರವಾದ ಪ್ರತಿಮೆಯಾಗಿದೆ, ಎನ್ನುವ ಲೇಖಕರು ಈ ವಚನದ ಲಯ ವೈವಿಧ್ಯ, ಗಣ ವಿನ್ಯಾಸ, ಯತಿ, ಪುನರಾವರ್ತನೆ, ಭಾಷೆಯ ಸಹಜ ಬಳಕೆ, ಕಾತರ ಮುಂತಾದುವು ಬಸವಣ್ಣನವರನ್ನು ವಿಶ್ವಮಟ್ಟದ ಕೀರ್ತಿಗೆ ಭಾಜನರಾಗುವಂತೆ ಮಾಡಿದೆ ಎಂದು ಕೊಂಡಾಡುತ್ತಾರೆ. 'ಕಳಬೇಡ, ಕೊಲಬೇಡ.....' ದಯವಿಲ್ಲದ ಧರ್ಮ ಯಾವುದಯ್ಯಾ...' ನುಡಿದರೆ ಮುತ್ತಿನ ಹಾರದಂತಿರಬೇಕು...' ಆಚಾರವೇ ಸ್ವರ್ಗ ಅನಾಚಾರವೇ ನರಕ...' ಇತ್ಯಾದಿ ವಿಶ್ವಮಾನವ ನೀತಿಯನ್ನು ಬೋಧಿಸುವ ವಚನಗಳನ್ನು ಉದಾಹರಿಸುತ್ತ ಅವು ಸಾರ್ವತ್ರಿಕವಾದ ಸರ್ವಮಾನ್ಯವಾದ ಮೌಲ್ಯಗಳನ್ನೊಳಗೊಂಡಿವೆ ಎಂದಿರುವುದು ಯಥಾರ್ಥವಾಗಿದೆ.

ಭಾವೈಕ್ಯ, ಸಹಜೀವನ ಹಾಗೂ ವಿಶ್ವಬಾಂಧವ್ಯಗಳು ಅಗತ್ಯವಿರುವ ಈ ಕಾಲದಲ್ಲಿ, ಬಸವಣ್ಣನವರ ಸಂದೇಶವು ಸ್ಫೂರ್ತಿಯ ಸೆಲೆಯಾಗಿದೆ. ಸ್ವಾತಂತ್ರ್ಯ, ಸಮಾನತೆ, ಸೋದರತ್ವಗಳನ್ನು ಬೋಧಿಸಿದ ಬಸವಣ್ಣನವರು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ರಂಗಗಳಲ್ಲಿ ಎಲ್ಲರಿಗೂ ನ್ಯಾಯ ಒದಗಿಸಲು ತೀವ್ರವಾಗಿ ಹೋರಾಡಿದರೆಂದೂ, ನಮ್ಮ ದೇಶದ ಇವತ್ತಿನ ಸಾಮಾಜಿಕ, ಧಾರ್ಮಿಕ

ಪರಿಸ್ಥಿತಿಯಲ್ಲಿ ಬಸವಣ್ಣನವರ ವಿಚಾರಬೋಧೆ ತುಂಬ ಮೌಲಿಕವಾಗಿ ಕಂಡುಬರುತ್ತದೆಂದೂ ಪರಿಗಣಿಸಿರುವುದು ಸಮಂಜಸವಾಗಿದೆ.

**ಮೋಳಿಗೆ ಮಹದೇವಿಯ 'ಕೈಯಲ್ಲಿ ಜ್ಯೋತಿಯ ಹಿಡಿದು' ವಚನ ವಿಶ್ಲೇಷಣೆ**

ಈ ಸಂಕಲನದ ಮೂರನೆಯ ಲೇಖನ ಮೋಳಿಗೆ ಮಹಾದೇವಿಯೆನ್ನುವ ವಚನಕಾರ್ತಿಯ ಒಂದು ಸೊಗಸಾದ ವಚನದ ವಿಶ್ಲೇಷಣೆಯಾಗಿದೆ. ಹನ್ನೆರಡನೆಯ ಶತಮಾನದ ವಚನ ಚಳುವಳಿಯಲ್ಲಿ ಅಸಂಖ್ಯಾತ ಮಹಿಳೆಯರು ಪಾಲ್ಗೊಂಡಿರುವುದು ಮಾತ್ರವಲ್ಲ, ಸುಮಾರು 33 ಜನ ಮಹಿಳೆಯರು ವಿದ್ಯಾವಂತರಾಗಿ ವಚನಗಳನ್ನೂ ರಚಿಸಿದ್ದಾರೆ. ಮೋಳಿಗೆಯ ಮಾರಮ್ಮ ರಚಿಸಿದ ಅರವತ್ತೊಂಭತ್ತು ವಚನಗಳು ಉಪಲಬ್ಧವಾಗಿವೆ. ಶಿವಭಕ್ತೆಯಾಗುವ ಮುನ್ನ ಆಕೆ ಕಾಶ್ಮೀರದ ಮಹಾರಾಣಿಯಾಗಿದ್ದಳು. ಆಕೆಯ ಮೂಲ ಹೆಸರು ಗಂಗಾಂಬಿಕೆ. ರಾಜದಂಪತಿಗಳು ತಮ್ಮ ಭೋಗಭಾಗ್ಯಗಳನ್ನು ತೊರೆದು ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕವನ್ನು ಕೈಗೊಳ್ಳುತ್ತಾರೆ. ಮಾರಮ್ಮನ ವಚನಗಳಲ್ಲಿ ಶ್ರೇಷ್ಠವಾಗಿರುವ 'ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇಕೆ' ಎಂಬ ವಚನವನ್ನು ಕುರಿತು ಅದರಲ್ಲಿನ ಆಶಯ ಮತ್ತು ಆಧ್ಯಾತ್ಮಿಕ ಜ್ಞಾನಸಂಪತ್ತಿನ ಮಹತ್ತನ್ನು ಕುರಿತು ಪ್ರೊ.ಬಷೀರ್ ಅವರು ಸೊಗಸಾದ ವ್ಯಾಖ್ಯಾನವನ್ನು ಮಾಡಿದ್ದಾರೆ.

**'ಜೇಡರ ದಾಸಿಮಯ್ಯನ 'ಇಳೆ ನಿಮ್ಮ ದಾನ' ವಚನ ವಿಶ್ಲೇಷಣೆ'**

ಇದು ಸಂಕಲನದ ನಾಲ್ಕನೆಯ ಲೇಖನ. ಬಸವಣ್ಣನವರಿಗಿಂತ ಪ್ರಾಚೀನವಾದ ಆದ್ಯವಚನಕಾರರಲ್ಲಿ ಒಬ್ಬನಾದ ಜೇಡರ ದಾಸಿಮಯ್ಯನ ಸುಪ್ರಸಿದ್ಧ ವಚನವಾದ 'ಇಳೆ ನಿಮ್ಮ ದಾನ'... ಎಂಬ ವಚನದ ವಿಶ್ಲೇಷಣೆ ಈ ಲೇಖನದ ವಸ್ತು. ಗುಲ್ಬರ್ಗ ಜಿಲ್ಲೆಯ ನೇಯ್ಗೆ ವೃತ್ತಿಯ ದಾಸಿಮಯ್ಯ ರಾಜಸತ್ತೆ ಮತ್ತು ಪುರೋಹಿತಶಾಹೀ ಧೋರಣೆಗಳ ವಿರುದ್ಧ ಪ್ರತಿಭಟನೆಯನ್ನು ತೋರಿದ ಕ್ರಾಂತಿಕವಿ. ಈತನ ಕಾಲದಲ್ಲೂ ಅದಕ್ಕಿಂತ ಪೂರ್ವದಿಂದಲೂ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಪರಿವರ್ತನೆಯ ಚಿಂತನೆಗಳು ನಡೆಯುತ್ತಿದ್ದುವು ಎಂಬುದಕ್ಕೆ ದಾಸಿಮಯ್ಯನ ವಚನಗಳೂ ಸಾಕ್ಷಿ ನುಡಿಯುತ್ತವೆ. ಉಪಲಬ್ಧ ವಚನಗಳ ಆಧಾರದಿಂದ ಆತ 'ವಚನ ಸಾಹಿತ್ಯದ ಪಿತಾಮಹ'ನೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಬಸವಣ್ಣನಿಗಿಂತ ಮೊದಲಿನ ವಚನಕಾರರಲ್ಲಿ ಅತ್ಯಧಿಕ ವಚನಗಳು ಲಭಿಸಿರುವುದು ದಾಸಿಮಯ್ಯನದ್ದೇ. ಮಾತ್ರವಲ್ಲ ಆತನ ಅನೇಕ ವಚನಗಳು ಕಾವ್ಯ ಸೌಂದರ್ಯದಿಂದಲೂ ಆಧ್ಯಾತ್ಮ ಸೌಂದರ್ಯದಿಂದಲೂ ನಿಬಿಡವಾಗಿರುವುದನ್ನು ಲೇಖಕರು ಚೆನ್ನಾಗಿಯೇ ಗುರುತಿಸಿದ್ದಾರೆ.

ದಾಸಿಮಯ್ಯನ 176 ವಚನಗಳು (188 ಮತ್ತು ಒಂದು ಸ್ವರವಚನ ಎನ್ನುವ ಅಭಿಪ್ರಾಯವೂ ಇದೆ– ದೇವರ ದಾಸಿಮಯ್ಯನ ವಚನಗಳು ಹಾಗೂ ದಶೋಪನಿಷತ್ತು ಡಾ.ಈಶ್ವರಾನಂದ ಸ್ವಾಮೀಜಿ. ಪು. 75)

ಲಭ್ಯವಾಗಿವೆಯೆನ್ನುವ ಲೇಖಕರು ಈತನ ವಚನಗಳು ಸಾಹಿತ್ಯಕ ಗುಣಗಳಿಂದ ಕೂಡಿದ್ದು ಸಂಕ್ಷಿಪ್ತತೆ, ಸರಳತೆ, ಅರ್ಥಪ್ರಚುರತೆ ಅವುಗಳ ವಿಶೇಷ ಗುಣಗಳಾಗಿವೆ ಎನ್ನುತ್ತಾರೆ.

ದಾಸಿಮಯ್ಯನ 'ಇಳೆ ನಿಮ್ಮ ದಾನ...' ಎಂಬ ವಚನವನ್ನು ಉದ್ಧರಿಸುತ್ತ ಈ ವಚನದಲ್ಲಿ 'ತಾತ್ತ್ವಿಕ ಹಾಗೂ ಆಧ್ಯಾತ್ಮಿಕ ಚಿಂತನೆ, ಸಾಮಾಜಿಕ ವಿಡಂಬನೆ, ದೈವಸ್ತುತಿ, ಟೀಕೆ, ಕೃತಜ್ಞತಾ ಮನೋಭಾವ, ಕೃತಘ್ನ ಬುದ್ಧಿ, ಸಾಹಿತ್ಯಕ ಗುಣಗಳನ್ನು ಕಾಣಬಹುದೆನ್ನುತ್ತ ನಾಲ್ಕು ಸಾಲುಗಳಿರುವ ಈ ವಚನದ ಪ್ರತಿಯೊಂದು ಸಾಲಿನ ರಚನೆ, ರೀತಿ, ಛಂದ, ಬಂಧಗಳನ್ನು ವಿವರಿಸಿ, ವರ್ಣಿಸಿ ಅವುಗಳ ಅಂತರಂಗ ಬಹಿರಂಗಗಳ ಅರ್ಥಭಾವಗಳನ್ನು ಅನಾವರಣ ಮಾಡಿದ್ದಾರೆ.

**ಘಟ್ಟಿವಾಳಯ್ಯ : ವ್ಯಕ್ತಿ ಮತ್ತು ಅಭಿವ್ಯಕ್ತಿ**

12ನೆಯ ಶತಮಾನದ ವಚನಕಾರರಲ್ಲಿ ಶ್ರೇಷ್ಠ ವಚನಕಾರನಾಗಿದ್ದರೂ ಅಷ್ಟು ಪ್ರಸಿದ್ಧಿಯನ್ನು ಪಡೆಯದ ವಚನಕಾರನಾದ ಘಟ್ಟಿವಾಳಯ್ಯನ ವ್ಯಕ್ತಿತ್ವ ಮತ್ತು ಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುವ ಉತ್ತಮ ಪ್ರಯತ್ನವನ್ನು ಈ ಲೇಖನ ನಿರ್ವಹಿಸಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ ಮತ್ತು ಸಾಮಾಜಿಕ ಚಳುವಳಿಯಲ್ಲಿ ಸಾಮೂಹಿಕವಾಗಿ ಧುಮುಕಿ ಆ ಕಾಲದ ಸಾಮಾಜಿಕ ಅಸಾಂಗತ್ಯಗಳನ್ನು ದೂರಮಾಡಿ ವೈಯಕ್ತಿಕವಾದ ಆಧ್ಯಾತ್ಮ ಮತ್ತು ಸಾಮಾಜಿಕ ನ್ಯಾಯ ಸಾಧನೆಯ ಸಲುವಾಗಿ ಎಲ್ಲ ವರ್ಗ, ವರ್ಣಗಳ ಜನರೂ ತಮ್ಮ ಬದುಕು ಬರೆಹಗಳನ್ನು ಮೀಸಲಾಗಿರಿಸಿದರು. ತಮ್ಮ ಭಾವನೆಯ ಅಭಿವ್ಯಕ್ತಿಗೆ ಸರಳವಾದ ಮಾರ್ಗವನ್ನು ಕಂಡುಹಿಡಿದುದರ ಫಲವಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿತು. ಈ ಕಾಲದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮುಂತಾದವರ ಸಮಕಾಲೀನನಾಗಿ ಬಾಳಿದ ವಚನಕಾರ ಘಟ್ಟಿವಾಳಯ್ಯ.

ಸು. 1160ರ ಕಾಲದವನಾದ ಈತ ನಟುವರ ಜಾತಿಗೆ ಸೇರಿದವನೆಂದು ತಿಳಿದುಬರುತ್ತದೆ. ಇತರ ವಚನಕಾರರು ಈತನ ಬಗ್ಗೆ ಹೇಳಿದ ಮಾತುಗಳ ಆಧಾರದಿಂದ ಈತ ಆ ಕಾಲದ ಒಬ್ಬ ಶ್ರೇಷ್ಠವಚನಕಾರನೆಂದು ಊಹಿಸಬಹುದಾದರೂ ಈತನ ಊರು ಮತ್ತು ವೈಯಕ್ತಿಕ ವಿಚಾರಗಳು ಯಾವುದೂ ಖಚಿತವಾಗಿ ತಿಳಿದು ಬಂದಿಲ್ಲ. ಮೋಳಿಗೆ ಮಾರಯ್ಯ, ಢಕ್ಕೆಯ ಬೊಮ್ಮಯ್ಯ, ಸಿದ್ಧರಾಮ, ಏಲೇಶ್ವರ ಕೇತಯ್ಯ, ಆದಯ್ಯ ಮುಂತಾದ ವಚನಕಾರರೆಲ್ಲ ಈತನನ್ನು ಗೌರವದಿಂದ ಸ್ಮರಿಸಿದ್ದಾರೆ. ಗೂಳೂರು ಸಿದ್ಧವೀರಣ್ಣೊಡೆಯರು ತಮ್ಮ ಶೂನ್ಯ ಸಂಪಾದನೆಯಲ್ಲಿ ಈತನಿಗಾಗಿ ಒಂದು ಪ್ರತ್ಯೇಕ ಭಾಗವನ್ನೇ ಮೀಸಲಾಗಿಟ್ಟಿರುವುದು ಈತನ ಶ್ರೇಷ್ಠತೆಯನ್ನು ಸಾಬೀತುಪಡಿಸುತ್ತದೆನ್ನುವ ಲೇಖಕರು ಅನೇಕ ವಚನಕಾರರ ಮಾತುಗಳನ್ನು ಉಲ್ಲೇಖಿಸಿರುವುದಲ್ಲದೆ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ವೀರಶೈವಾಮೃತ ಮಹಾಪುರಾಣ, ಪ್ರೌಢದೇವರಾಯನ ಕಾವ್ಯ, ಶೂನ್ಯ ಸಂಪಾದನೆ ಮೊದಲಾದ

ಕೃತಿಗಳಲ್ಲಿ ಘಟ್ಟಿವಾಳಯ್ಯನ ಬದುಕಿಗೆ ಸಂಬಂಧಿಸಿದ ವಿವರಗಳು ಧಾರಾಳವಾಗಿ ಸಿಗುತ್ತವೆ ಎನ್ನುವ ಮಾಹಿತಿಗಳನ್ನೂ ನೀಡುತ್ತಾರೆ).

ಘಟ್ಟಿವಾಳಯ್ಯ ಕೈಲಾಸದ ಪ್ರಮಥಗಣಗಳಲ್ಲಿ ಒಬ್ಬನೆಂದೂ ವೀರಶೈವ ಧರ್ಮದ ಉದ್ಧಾರಕ್ಕಾಗಿ ಭೂಲೋಕದಲ್ಲಿ ಅವತರಿಸಿದನೆಂದೂ ಮುದ್ದಣ ನಾಮಧೇಯದಿಂದ ಮದ್ದಳೆಯನ್ನು ಬಾರಿಸುತ್ತಿದ್ದನೆಂದೂ ಭಕ್ತಿ ಜ್ಞಾನ ಕ್ರಿಯೆಗಳಲ್ಲಿ ನುಡಿದಂತೆ ನಡೆಯುವ ಗಟ್ಟಿಗನಾದ್ದರಿಂದ ಘಟ್ಟಿವಾಳಯ್ಯನಾದನೆಂದೂ ಶ್ರುತಪಡಿಸುತ್ತಾರೆ.

ವೈರಾಗ್ಯದ ಪ್ರತಿಮೂರ್ತಿಯಾದ ಘಟ್ಟಿವಾಳಯ್ಯ ಕೌಟುಂಬಿಕ ಜೀವನದಿಂದ ಬಹುಬೇಗನೆ ವೈರಾಗ್ಯಗೊಂಡು ಕಾಲಜ್ಞಾನವನ್ನು ಬೋಧಿಸುತ್ತ ಸದ್ಭಕ್ತಿ ಭಿಕ್ಷೆಯನ್ನು ಉಣ್ಣುತ್ತ ಕಲ್ಯಾಣಕ್ಕೆ ಹೋಗಿ ಬಸವೇಶ್ವರರ ಮಹಾಮನೆಯನ್ನು ಪ್ರವೇಶಿಸಿ ಮುಂದೆ ಅತಿ ದೊಡ್ಡ ಅನುಭಾವಿಯಾಗುತ್ತಾನೆ; ಜಂಗಮರನ್ನೂ ಪರೀಕ್ಷಿಸುವಷ್ಟು ಹಿರಿಮೆಯುಳ್ಳ ಜ್ಞಾನಿಯಾಗುತ್ತಾನೆ. ಘಟ್ಟಿವಾಳಯ್ಯನ ಅಂಕಿತ 'ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ' ಸುಮಾರು 150 ವಚನಗಳನ್ನು ರಚಿಸಿದ ಈತ ತನ್ನ ಆಧ್ಯಾತ್ಮ ಬದುಕಿನಲ್ಲಿ ಪವಾಡಸದೃಶ ವ್ಯಕ್ತಿಯಾಗಿಯೂ ಖ್ಯಾತನಾಗಿದ್ದಾನೆ. ಪ್ರೊ.ಬಷೀರ್ ಅವರು ಘಟ್ಟಿವಾಳಯ್ಯನು ವಚನಗಳನ್ನಲ್ಲದೆ 7 ಸಂಧಿಗಳೂ 393 ಪದಗಳೂ ಇರುವ ಕಾಲಜ್ಞಾನವನ್ನೂ ರಚಿಸಿದ್ದಾನೆಂದು ತಿಳಿಸುತ್ತ ಆತನ ವಚನಗಳನ್ನು ಆಶಯಕ್ಕನುಗುಣವಾಗಿ ಧರ್ಮ, ಸಮಾಜ ಮತ್ತು ಬೆಡಗಿನ ವಚನಗಳೆಂದು ವಿಭಾಗಿಸಬಹುದು ಎನ್ನುತ್ತಾರೆ. ಮಾತ್ರವಲ್ಲ ಘಟ್ಟಿವಾಳಯ್ಯನ ವಚನಗಳನ್ನು ಈ ಮೂರು ನೆಲೆಗಳಲ್ಲಿ ಬಹಳ ಸೊಗಸಾಗಿಯೇ ವಿಶ್ಲೇಷಿಸಿದ ಲೇಖಕರು ಸಮಾಜಿಕವಾಗಿಯೂ ಆಧ್ಯಾತ್ಮಿಕವಾಗಿಯೂ ದಯೆ, ವಿನಯ, ಸತ್ಯ, ಅಹಿಂಸೆ, ಇಂದ್ರಿಯ ನಿಗ್ರಹ, ನಿಷ್ಠೆಗಳಂಥ ಸದಾಚಾರಗಳ ಮೂಲಕ ಜಂಗಮತ್ವವನ್ನು ಸಾಧಿಸಬೇಕೆನ್ನುವ ಘಟ್ಟಿವಾಳಯ್ಯನ ಜೀವನಧ್ಯೇಯವನ್ನು ಉಲ್ಲೇಖಿಸುತ್ತ ಆತ ಬದುಕಿನ ನೈತಿಕ ಮೌಲ್ಯಗಳಿಗೆ ಒತ್ತುಕೊಟ್ಟಿರುವ ಅಂಶವನ್ನು ಅನೇಕ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

ವಚನಕಾರರ ಚಿಂತನೆಗೆ ಧಾರ್ಮಿಕ ಹಾಗೂ ಸಾಮಾಜಿಕವಾದ ಎರಡು ಪೂರ್ಣವಾಗಿ ಬೇರ್ಪಡಿಸಲಾಗದ ಮುಖಗಳಿವೆಯೆನ್ನುವ ಪ್ರೊ.ಬಷೀರ್ ಸಾಮಾಜಿಕ ಹೊಣೆಗಾರಿಕೆ ಕೇವಲ ಲೌಕಿಕವಾದುದೆಂದು ವಚನಕಾರರು ಭಾವಿಸಿರಲಿಲ್ಲ. ಅದು ಮೂಲತಃ ಆಧ್ಯಾತ್ಮಿಕವಾದ ಒಂದು ಸಂಸ್ಕಾರವನ್ನು ಉಂಟುಮಾಡುವುದರ ಮೂಲಕ ವ್ಯಕ್ತಿಯ ಲೋಕಜೀವನವನ್ನು ಇನ್ನೂ ಉತ್ತಮವಾಗಿ ಮಾಡುವ ಉದ್ದೇಶದ್ದಾಗಿದೆ ಎಂದು ನಿರೂಪಿಸಿರುವುದು ಯಥಾರ್ಥವಾಗಿದೆ.

ವಚನ ಸಾಹಿತ್ಯ ಧರ್ಮ ಕಾವ್ಯಗಳೆರಡರ ಸಂಗಮ ಸ್ವರೂಪಿ. ಘಟ್ಟಿವಾಳಯ್ಯನ ವಚನಗಳು ಇದಕ್ಕೆ ಹೊರತಾಗಿಲ್ಲ. ಆಯಾ ಸಂದರ್ಭಗಳಲ್ಲಿ ಆತನ ಮನಸ್ಥಿತಿ ಹೇಗಿರುತ್ತಿತ್ತೋ ಅದಕ್ಕನುಸಾರವಾಗಿ ವಚನಗಳು

ಲಯಬದ್ಧವಾಗಿ ಸಹಜವಾಗಿ ದೃಷ್ಟಾಂತ, ಉಪಮೆ, ರೂಪಕಗಳೊಂದಿಗೆ ಹೊರಹೊಮ್ಮಿವೆ. ಹಿರಿಯ ಲೋಕಾನುಭವಿಯೂ ಶಿವಾನುಭವಿಯೂ ಆಗಿದ್ದ ಘಟ್ಟಿವಾಳಯ್ಯನ 'ರೋಗಿಗೆ ಹಾಲು ಸಿಹಿಯಪ್ಪುದೆ?' 'ಕೊಡಲಿಯ ಕಾವು ಕುಲಕ್ಕೆ ಮಿತ್ತಾದಂತೆ', ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ' ಇತ್ಯಾದಿ ಗಾದೆಮಾತುಗಳಂಥ ವಚನಸಾಲುಗಳನ್ನು ಉದ್ಧರಿಸುತ್ತ ಅವುಗಳಲ್ಲಿ ಲೋಕಾನುಭವಜ್ಞಾನ ಅಂತರಂಗದನುಭವಜ್ಞಾನ ಸೊಗಸಾಗಿ ಮಿಳಿತವಾಗಿದೆ ಎಂದಿರುವುದು ಗಮನಾರ್ಹ.

ಘಟ್ಟಿವಾಳಯ್ಯನ ವಚನಗಳ ಭಾಷೆ ಮತ್ತು ಶೈಲಿಯನ್ನು ಕುರಿತು ನಿರೂಪಿಸುತ್ತ ವಚನಕಾರರು ಹತ್ತನೆಯ ಶತಮಾನದ ಸಂಸ್ಕೃತಭೂಯಿಷ್ಠ ಭಾಷೆಯನ್ನು ತಿರಸ್ಕರಿಸಿ ಮಾತನಾಡಿದಂತಿರುವ ನಡುಗನ್ನಡ ಭಾಷೆಯನ್ನು ಬಳಸಿಕೊಂಡದ್ದು ಕ್ರಾಂತಿಕಾರಕ ವಿಷಯವಾಗಿದೆಯೆಂದೂ ಕಾವ್ಯವಸ್ತು, ಭಾಷೆ, ಅಭಿವ್ಯಕ್ತಿ ಮಾಧ್ಯಮ– ಈ ದೃಷ್ಟಿಗಳಿಂದ ವಚನಕಾರರು ಹಿಂದೆಂದೂ ಇಲ್ಲದಿದ್ದ ರೀತಿಯಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸಿದರೆಂದೂ ಅಭಿಪ್ರಾಯಿಸುವ ಲೇಖಕರು 'ವಚನಕಾರರು ಸಾಹಿತ್ಯಕ್ಕೊಂದು ಹೊಸದಿಗಂತವನ್ನು ತೆರೆದರೆನ್ನುವ' ಡಾ.ಕೆ.ವಿ. ನಾರಾಯಣರ ಮಾತುಗಳನ್ನು ಘಟ್ಟಿವಾಳಯ್ಯನ ವಚನಗಳ ಆಧಾರದಿಂದ ಸಮರ್ಥಿಸಿರುವುದು ಅತ್ಯಂತ ಪ್ರಸ್ತುತವಾಗಿದೆ.

**ಘಟ್ಟಿವಾಳಯ್ಯನ ಒಂದು ಅಪೂರ್ವ ವಚನ**

ಈ ಲೇಖನದಲ್ಲಿ ಲೇಖಕರು ಘಟ್ಟಿವಾಳಯ್ಯನ ಪ್ರಕಟಿತ ಹಾಗೂ ಅಪ್ರಕಟಿತ ವಚನಗಳನ್ನು ಪಟ್ಟಿಮಾಡಿ 'ಜಂಗಮವಾಗಿ ಜಂಗಮದ ಕೊಂದಾಗಲೆ ತನ್ನ ದೈವ ತನಗಿಲ್ಲ' ಎಂಬ ಒಂದು ಅಪ್ರಕಟಿತ ಅಪೂರ್ವ ವಚನದ ಅರ್ಥ ಭಾವವನ್ನು ವಿಶ್ಲೇಷಿಸುತ್ತಾರೆ. ಈ ವಚನದ ಕೆಲವು ವಿಶಿಷ್ಟ ಪದಗಳನ್ನು ಆರಿಸಿ ಅವುಗಳ ಅರ್ಥಪ್ರಕ್ರಿಯೆಗಳನ್ನು ವಿವರಿಸಿ ಅವುಗಳಲ್ಲಿ ಹುದುಗಿದ ವಿಭಿನ್ನ ಧ್ವನಿ, ಚಿಂತನೆಗಳ ಆಯಾಮಗಳನ್ನು ಶೋಧಿಸಿ ಸಹೃದಯರ ಗಮನವನ್ನು ಈ ವಚನದ ಕಡೆಗೆ ಸೆಳೆಯುವುದೇ ತಮ್ಮ ಉದ್ದೇಶವೆಂದು ಹೇಳುವುದು ಪರಿಭಾವನಾ ಯೋಗ್ಯವಾಗಿದೆ. ಇದರಲ್ಲಿ ವಚನ ಸಾಹಿತ್ಯದ ಬಗ್ಗೆ ಲೇಖಕರು ತೋರುವ ಒಲವು, ಅಭಿಮಾನಗಳೂ ಸುವ್ಯಕ್ತವಾಗಿವೆ.

**ದಸರಯ್ಯ**

ಈತ ಒಬ್ಬ ವಚನಕಾರ, ಬಸವಣ್ಣನವರ ಸಮಕಾಲೀನ. ಅಹಿಂಸಾ ವ್ರತಧಾರಿಯೂ ದಯಾನಿಧಿಯೂ ಆಗಿದ್ದ ದಸರಯ್ಯನ ದಯಾಗುಣವನ್ನು ಭೀಮಕವಿ, ಸಿಂಗಿರಾಜ, ಷಡಕ್ಷರದೇವ, ಲಕ್ಕಣದಂಡೇಶ, ಮುಂತಾದ ಕವಿಗಳು ಬಹಳ ಚೆನ್ನಾಗಿಯೇ ಗುರುತಿಸಿದ್ದಾರೆನ್ನುತ್ತ, ಬಷೀರ್ ಅವರು ಲಕ್ಕಣ ದಂಡೇಶನ ಕಾವ್ಯದಲ್ಲಿ ಬರುವ ದಸರಯ್ಯನ ಕಥಾಸಾರವನ್ನು ನಿರೂಪಿಸುತ್ತಾರೆ.

ದಿನವೂ ಗಿಡಗಳಿಂದ ಹೂಗಳನ್ನು ಕುಯ್ದು ತಂದು ಶಿವನ ಪೂಜೆಯನ್ನು ಮಾಡುತ್ತಿದ್ದ ದಸರಯ್ಯ ಒಬ್ಬ ಮಹಾ ಶಿವಭಕ್ತ. ಒಂದು ಸಲ ಹೂಗಳನ್ನು ಕುಯ್ಯುವ ಸಂದರ್ಭದಲ್ಲಿ ರೆಂಬೆ ಮುರಿದು ಅದರಿಂದ ರಕ್ತವೇ ಸೋರಿದಂತೆ ಭಾಸವಾಗಿ ಅಂದಿನಿಂದ ಗಿಡದಿಂದ ಹೂವು ಕೀಳದೆ ಉದುರಿ ಬಿದ್ದ ಹೂಗಳನ್ನು ಆರಿಸಿ ತಂದು ಶಿವಪೂಜೆ ಮಾಡತೊಡಗಿದ. ನಡೆಯುವಾಗಿ ಕ್ರಿಮಿ ಕೀಟಾದಿಗಳಿಗೆ ನೋವಾಗಬಾರದೆಂದು ನಿಧಾನವಾಗಿ ಹೆಜ್ಜೆಯಿಡುತ್ತಿದ್ದ ಅಹಿಂಸಾ ವ್ರತನಿಷ್ಠ ದಸರಯ್ಯನ ಒಳ್ಳೆಯತನ, ಅಹಿಂಸೆಗಳಿಂದ ಅಸೂಯೆ ತಾಳಿದ ದುಷ್ಟರು ಅವನಿಗೆ ನಾನಾ ಬಗೆಯಲ್ಲಿ ಕಿರುಕುಳ ಕೊಡುತ್ತಾರೆ. ಆದರೆ ಅವನ ಭಕ್ತಿಯ ಮುಂದೆ ಅವರೆಲ್ಲ ಸೋತುಹೋಗುತ್ತಾರೆ.

ದಸರಯ್ಯನ ಅಂಕಿತ 'ದಸರೇಶ್ವರ ಲಿಂಗ', ಈತ ಬರೆದಿರುವ ಹತ್ತು ವಚನಗಳು ಲಭಿಸಿವೆ. ಪ್ರತಿಯೊಂದು ವಚನದಲ್ಲಿಯೂ ಶಿವಾನುಭವ ತತ್ತ್ವ ಮತ್ತು ದಯೆಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆಂದು ಹೇಳುವ ಲೇಖಕರು ಕೆಲವು ವಚನಗಳನ್ನು ಉದ್ಧರಿಸಿ, ವಿವರಿಸಿ ದಸರಯ್ಯನ ವಚನಗಳು ಗಣದಲ್ಲಿ ಕಡಿಮೆಯಾದರೂ ಗುಣದಲ್ಲಿ ಮಿಗಿಲಾಗಿವೆಯೆನ್ನುವುದನ್ನು ಸಾಬೀತು ಪಡಿಸಿದ್ದಾರೆ.

**ಚಂದಿಮರಸ**

ಚಂದಿಮರಸ ಒಬ್ಬ ವಚನಕಾರ. ಸಂಸ್ಕೃತ ವಿದ್ವಾಂಸನಾಗಿದ್ದ ಈತ ಬಸವಣ್ಣನವರಿಗಿಂತ ಸ್ವಲ್ಪ ಕಾಲ ಹಿಂದಿದ್ದವನಾಗಿರಬೇಕೆಂದೂ, ಈತ ಕೆಂಭಾವಿ ಭೋಗಣ್ಣ ನಿಜಗುಣರ ಸಮಕಾಲೀನನೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈತನನ್ನು ಅಕ್ಕಮಹಾದೇವಿ, ಘನಲಿಂಗ ಮುಂತಾದವರು ಸ್ಮರಿಸಿದ್ದಾರೆ. ಚಂದಿಮರಸನು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಕೆಂಭಾವಿಯಲ್ಲಿ ಅರಸನಾಗಿದ್ದವನು. ಭೋಗಣ್ಣನೆಂಬ ಬ್ರಾಹ್ಮಣನು ಶಿವದೀಕ್ಷೆಯನ್ನು ಪಡೆದು ಶಿವಭಕ್ತರಲ್ಲಿ ಜಾತಿಭೇದವಿಲ್ಲವೆಂದು ಪ್ರತಿಪಾದಿಸುತ್ತ ಅದರಂತೆ ಬದುಕುತ್ತಿದ್ದುದನ್ನು ನೋಡಿ ಉಳಿದವರೆಲ್ಲ ರಾಜನಿಗೆ ದೂರು ಹೇಳಿದಾಗ ರಾಜ ಅವನನ್ನು ದೇಶಬಿಟ್ಟು ಹೋಗಲು ಆದೇಶಿಸುತ್ತಾನೆ. ಭೋಗಣ್ಣ ಊರುಬಿಟ್ಟು ಹೋಗುವಾಗ ಅವನೊಂದಿಗೆ ಊರಲ್ಲಿದ್ದ ಶಿವಲಿಂಗವೆಲ್ಲವೂ ಕುಣಿಯುತ್ತ ಹೋಗುತ್ತವೆ. ಭೋಗಣ್ಣನ ಭಕ್ತಿಯ ಮಹತ್ವವನ್ನು ಅರಿತು ರಾಜ ಆತನನ್ನು ಬರಮಾಡಿಕೊಂಡಾಗ ಅವನೊಂದಿಗೆ ಶಿವಲಿಂಗಗಳೂ ಸ್ವಸ್ಥಾನಕ್ಕೆ ಮರಳುತ್ತವೆ. ತಾನು ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪಗೊಂಡ ಚಂದಿಮರಸ ವೀರಶೈವನಾಗುತ್ತಾನೆ. ರಾಜ್ಯವನ್ನು ತ್ಯಜಿಸಿ ಚಿಮ್ಮಲಿಗೆ ಎಂಬ ಊರಿಗೆ ಬಂದು ನಿಜಗುಣರಿಂದ ದೀಕ್ಷೆಯನ್ನು ಪಡೆದು ವಚನಗಳನ್ನು ರಚಿಸುತ್ತಿದ್ದು ಅನಂತರ ಲಿಂಗೈಕ್ಯನಾಗುತ್ತಾನೆ.

ಚಂದಿಮರಸನದೆಂದು ಹೇಳಲಾಗುವ 145 ವಚನಗಳು ಉಪಲಬ್ಧವಾಗಿವೆಯೆಂದೂ ಅನೇಕ ವಚನಕಾರರು ಈತನ ವಚನಗಳನ್ನು ಉಲ್ಲೇಖಿಸಿರುವುದನ್ನು ನೋಡಿದರೆ ಈತ ಆ ಕಾಲದ ಮುಖ್ಯ

ವಚನಕಾರನಾಗಿರಬೇಕೆಂದೂ ಲೇಖಕರು ತರ್ಕಿಸುತ್ತಾರೆ. ಈತನ ವಚನಗಳ ಅಂಕಿತ 'ನಿಮ್ಮಲಿಗೆಯ ಚೆನ್ನರಾಮಾ'. ಶಿವಾನುಭವ ತತ್ತ್ವ, ವೀರಶೈವ ಧರ್ಮದ ತತ್ತ್ವಗಳ ವಿವರಣೆ, ಸ್ತ್ರೀಯರ ಬಗ್ಗೆ ಎಚ್ಚರಿಕೆ, ವಿಷಯಾಸಕ್ತಿ ನಿಗ್ರಹ, ಗುರುಮಹತ್ವ, ಅಹಂಕಾರ ನಿರಸನ– ಹೀಗೆ ಮನುಷ್ಯನಿಗೂ ಪ್ರಪಂಚಕ್ಕೂ, ಮನುಷ್ಯನಿಗೂ ಶಿವನಿಗೂ ಇರುವ ಸಂಬಂಧವೆಂತಹದು ಎಂಬಿವೇ ಮುಂತಾದ ವಿಷಯಗಳನ್ನು ಕುರಿತು ಚಂದಿಮರಸ ವಚನಗಳನ್ನು ರಚಿಸಿದನೆನ್ನುತ್ತ ಆತನ 'ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಿದಡೇನುಪ್ಪುದೆಲವೋ' ಎಂಬ ಬಹಳ ಅರ್ಥಗರ್ಭಿತವಾದ ವಚನವನ್ನು ಲೇಖಕರು ಉಲ್ಲೇಖಿಸುತ್ತಾರೆ.

ಅಕ್ಕ, ಬಸವಣ್ಣ ಮುಂತಾದವರ ವಚನಗಳಿಂದ ಪ್ರಭಾವಿತನಾಗಿದ್ದರೂ ಮಹಿಳೆಯರ ಬಗೆಗಿನ ಚಂದಿಮರಸನ ಕಲ್ಪನೆ ವಿಶಿಷ್ಟವಾಗಿದೆ. ಹೆಣ್ಣು ಸಕಲ ದುಃಖದ ಆಗರವೆಂದೂ ನರಕರ ಪಾಕುಳರೆಂದೂ ಅವನು ಅಭಿಪ್ರಾಯಿಸುತ್ತಾನೆ.

**ಕೊಟ್ಟಣದ ಸೋಮವ್ವ**

ಈಕೆ ಓರ್ವ ಅಪರೂಪದ ವಚನಕಾರ್ತಿ, ಹನ್ನೆರಡನೆಯ ಶತಮಾನದ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಬಹಳ ಮುಖ್ಯವಾದ ಸಾಧನೆಯೆಂದರೆ ಮಹಿಳೆಯರು ಕೂಡ ಓದು ಬರೆಹ ಕಲಿತು ವಿದ್ಯಾವಂತರೂ ಬರೆಹಗಾರರು ಆದುದು. ಆ ಕಾಲದ ಸುಮಾರು 33 ಜನ ವಚನಕಾರ್ತಿಯರಲ್ಲಿ ಕೊಟ್ಟಣದ ಸೋಮವ್ವೆ ಒಬ್ಬಳು. ಬಷೀರ್ ಅವರು ಈ ಲೇಖನದಲ್ಲಿ ಸ್ತ್ರೀಗೆ ಆತ್ಮದ ಏಕತೆ, ಕೌಟುಂಬಿಕ ಜೀವನದ ಪುರಸ್ಕಾರ ಹಾಗೂ ಧಾರ್ಮಿಕ ಸಾಮಾಜಿಕ ಸ್ವಾತಂತ್ರ್ಯಗಳ ಅರಿವಿನ ಜ್ಯೋತಿರ್ಲಿಂಗ ದರ್ಶನವನ್ನು ಮಾಡಿಸಿದ ಶಿವಶರಣರು ಹೆಣ್ಣನ್ನು ಮಾಯಾಸೆರೆಯಿಂದ ವಿಮುಕ್ತಿಗೊಳಿಸಿದರಲ್ಲದೆ ಪರಸ್ತ್ರೀಯರಲ್ಲಿ ಮಾತೃತ್ವವನ್ನೂ ದೈವತ್ವವನ್ನೂ ಪಾರ್ವತೀ ಭಾವವನ್ನೂ ಕಾಣಬೇಕೆಂದು ನುಡಿದರು ಎನ್ನುವ ಮಹತ್ವದ ಅಂಶವನ್ನು ದಾಖಲಿಸುತ್ತ ಅಂಬಿಗರಚೌಡಯ್ಯ, ಚಂದಿಮರಸ, ಅಲ್ಲಮಪ್ರಭು ಮುಂತಾದವರ ವಚನಗಳನ್ನು ಉಲ್ಲೇಖಿಸುತ್ತಾರೆ.

ಮಹಿಳೆಯರ ಅಂತರಂಗದ ಅನುಭಾವ ಹೃದಯವನ್ನು ತುಂಬಿ ಹೊರಸೂಸಿ ವಚನರೂಪವನ್ನು ತಾಳಿದೆಯೆನ್ನುವುದೂ ಆಧ್ಯಾತ್ಮಜ್ಞಾನದೊಂದಿಗೆ ಲೌಕಿಕಾನುಭವವನ್ನೂ ಸೇರಿಸಿ ಜನಸಾಮಾನ್ಯರಿಗೂ ತಿಳಿಯುವಂತೆ ಸುಲಭ–ಸುಂದರ ಶೈಲಿಯಲ್ಲಿ ರಚನೆಯಾದ ಶಿವಶರಣೆಯರ ವಚನಗಳು ಕನ್ನಡ ಸಾಹಿತ್ಯ ಸಂಪತ್ತನ್ನು ಶ್ರೀಮಂತಗೊಳಿಸಿ ವೆಯೆನ್ನುವುದೂ ನಿಜ. ಆದರೆ ವಚನಕಾರ್ತಿಯರು ತಮ್ಮ ದೈನಂದಿನ ಬದುಕಿನ ಸಮಸ್ಯೆಗಳನ್ನಾಗಲೀ ಬಗೆಬಗೆಯ ಭಾವನೆಗಳನ್ನಾಗಲೀ ತಮಗೆ ದೊರೆತ ಬೌದ್ಧಿಕ ಸಾಮಾಜಿಕ ಸಮಾನತೆ ಹಾಗೂ ಸ್ವಾತಂತ್ರ್ಯವನ್ನಾಗಲೀ ತಮ್ಮ ವಚನಗಳಲ್ಲಿ ಹೇಳಿಕೊಳ್ಳದಿರುವುದು ಒಂದು ಕೊರತೆಯೇ

ಸರಿ ಎಂಬ ಲೇಖಕರ ಅಭಿಪ್ರಾಯ ಅತ್ಯಂತ ಸಮಂಜಸವಾಗಿದೆ. ಅಕ್ಕನಂಥ ದಿಟ್ಟ ಮಹಿಳೆಯಾಗಲೀ, ಕಾಳವ್ವೆಯಂಥ ಕ್ರಾಂತಿಕಾರೀ ಮಹಿಳೆಯಾಗಲೀ ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯರನ್ನು ಕಾಡುವ ವೈಯಕ್ತಿಕವಾದ ಅಥವಾ ಸಾರ್ವತ್ರಿಕವಾದ ಯಾವ ಸಮಸ್ಯೆಯನ್ನೂ ತಮ್ಮ ವಚನಗಳಲ್ಲಿ ಹೇಳಿಕೊಂಡಿಲ್ಲ. ಎಷ್ಟೇ ವಿದ್ಯಾವಂತರಾದರೂ ಸಮಾಜದ ಕಟ್ಟುಪಾಡುಗಳನ್ನು ಪ್ರಶ್ನಿಸುವುದಕ್ಕೆ ಆ ಕಾಲದ ಯಾವ ಮಹಿಳೆಯರಿಗೂ ಸಾಧ್ಯವಾಗಿಲ್ಲವೆಂದೂ ಎಲ್ಲರೂ ಸಮಸ್ಯೆಯೊಳಗಿದ್ದುಕೊಂಡೇ ತಮಗೆ ಲಭ್ಯವಾದ ಅವಕಾಶಗಳನ್ನು ಶಿವಭಕ್ತಿಯ ಪ್ರಸಾರ ಹಾಗೂ ಸಾಮೂಹಿಕ ಹಿತಾಸಕ್ತಿಗಾಗಿ ಮಾತ್ರ ಬಳಸಿದರೆಂದೂ ಊಹಿಸಬಹುದಾಗಿದೆ. ಬಹುತೇಕ ಮಹಿಳೆಯರು ತಮ್ಮ ವಚನಗಳಿಗೆ ಅಂಕಿತವಾಗಿ ಗಂಡಂದಿರ ಹೆಸರನ್ನೇ ಉಲ್ಲೇಖಿಸಿರುವುದು ಈ ಊಹೆಯನ್ನು ದೃಢಪಡಿಸುತ್ತದೆ. ಈ ವಿಚಾರಗಳನ್ನು ಪರಿಭಾವಿಸಿದರೆ ವಚನ ಚಳುವಳಿಯ ಕಾಲದಲ್ಲೂ ಮಹಿಳೆಯರಿಗೆ ಲಭ್ಯವಾಗಿದ್ದ ಸ್ವಾತಂತ್ರ್ಯದ ಪರಿಮಿತಿಯನ್ನು ಅರ್ಥಮಾಡಬಹುದು.

ಕೊಟ್ಟಣದ ಸೋಮವ್ವೆ ಹೆಸರಿನಂತೆಯೇ ಶಿವಭಕ್ತರ ಮನೆಗಳಿಗೆ ಹೋಗಿ ದವಸ ಧಾನ್ಯಗಳನ್ನು ಕುಟ್ಟುವ ಕಾಯಕವನ್ನು ಮಾಡುತ್ತ ಅದರಿಂದ ಬರುವ ವರಮಾನದಿಂದ ಬದುಕು ಸಾಗಿಸುವ ದಲಿತ ಮಹಿಳೆ, ಈಕೆ ಬರೆದ ಒಂದೇ ಒಂದು ವಚನ ಉಪಲಬ್ಧವಾಗಿದ್ದರೂ ಅದರ ಅಭಿವ್ಯಕ್ತಿಯನ್ನು ಗಮನಿಸಿದರೆ ಆಕೆ ಇನ್ನಷ್ಟು ವಚನಗಳನ್ನು ಬರೆದಿರುವ ಸಾಧ್ಯತೆಯಿದೆಯೆಂದು ಲೇಖಕರು ಊಹಿಸುತ್ತಾರೆ. ಇತರ ವಚನಕಾರ್ತಿಯರಂತೆ ತನ್ನ ಕಾಯಕಕ್ಕೆ ಸಂಬಂಧಿಸಿದ ಪರಿಚಿತ ದೃಷ್ಟಾಂತಗಳ ಮೂಲಕ ವಿಚಾರವನ್ನು ಸಮರ್ಥಿಸುವ ಸೋಮವ್ವೆ ವ್ರತನಿಷ್ಠೆಯನ್ನು ಎತ್ತಿ ಹಿಡಿದು ವ್ರತಹೀನರನ್ನು ಕಟುವಾಗಿ ಟೀಕಿಸುತ್ತಾಳೆ. ಸೋಮವ್ವೆಯ ಅಂಕಿತ 'ನಿರ್ಲಜ್ಜೇಶ್ವರ'. ಲೇಖಕರು ಹನ್ನೆರಡನೆಯ ಶತಮಾನದ ಇನ್ನೋರ್ವ ವಚನಕಾರ್ತಿ ಸೂಳೆ ಸಂಕವ್ವನೆಂಬವಳ ವಚನವನ್ನು ಉಲ್ಲೇಖಿಸಿ ಇಬ್ಬರ ಅಂಕಿತ ಮತ್ತು ವಚನ ಸೌಂದರ್ಯದ ಸಾಮ್ಯತೆಯನ್ನು ಗುರುತಿಸಿರುವುದು ಗಮನಾರ್ಹ.

**ಅಕ್ಕಮ್ಮನ ಎರಡು ವಚನಗಳು**

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಪ್ರಚಲಿತವಾಗಿದ್ದ ರಾಜಸತ್ತೆ ಮತ್ತು ಪುರೋಹಿತಶಾಹಿ ದಬ್ಬಾಳಿಕೆಗಳ ಬಗ್ಗೆ ಪ್ರತಿಭಟನೆಯನ್ನು ಮಾಡುತ್ತಲೇ ಆತ್ಮೋದ್ಧಾರ ಮತ್ತು ಸಮಾಜೋದ್ಧಾರವನ್ನು ಮಾಡಿದವರು ವಚನಕಾರರೆಂಬ ಅಂಶವನ್ನು ಪ್ರಸ್ತಾಪಿಸುವ ಲೇಖಕರು ಈ ಕಾಲದಲ್ಲಿ ಮಹಿಳೆಯರೂ ಮನೆಯಿಂದಾಚೆ ಹೆಜ್ಜೆಯಿಟ್ಟು ಸ್ವಾತಂತ್ರ್ಯದ ಗಾಳಿ ಬೆಳಕುಗಳನ್ನು ಅನುಭವಿಸಿದರೆನ್ನುತ್ತಾರೆ. ಇವರು ಶಿವಭಕ್ತರಾಗಿ ಶಿವಭಕ್ತಿಯ ಪಾರಮ್ಯವನ್ನು ಪ್ರಸಾರ ಮಾಡಿರುವುದಲ್ಲದೆ ಜಾತೀಯತೆ, ಮೇಲು ಕೀಳು ಭಾವವನ್ನು ಖಂಡಿಸಿದರು. ವಿದ್ಯಾವಂತರಾಗಿ ಪುರುಷರೊಂದಿಗೆ

ಹೋರಾಟದ ಕಣಕ್ಕಿಳಿದು ತಮ್ಮ ಅಂತರಂಗದ ಆಧ್ಯಾತ್ಮಿಕ ಭಾವನೆಗಳಿಗೆ ಮಾತಿನ ರೂಪವನ್ನು ಕೊಟ್ಟ ಸುಮಾರು 33ಕ್ಕಿಂತಲೂ ಹೆಚ್ಚುಜನ ವಚನಕಾರ್ತಿಯರಲ್ಲಿ ಒಬ್ಬಳು ಅಕ್ಕಮ್ಮ. ಅಕ್ಕಮ್ಮ ರಚಿಸಿದ 155 ವಚನಗಳು ಲಭಿಸಿವೆಯೆಂದೂ ಮೂರು ಸಾಲಿನಿಂದ 29 ಸಾಲುಗಳವರೆಗಿನ ವಚನಗಳನ್ನು ಈಕೆ ಬರೆದಿದ್ದಾಳೆಂದೂ ತಿಳಿಸುವ ಲೇಖಕರು ಈಕೆಯ ವಚನಗಳಲ್ಲಿ ಕಾವ್ಯಸೌಂದರ್ಯಕ್ಕಿಂತ ಚಿಂತನೆಯ ಅಂಶ ದಟ್ಟವಾಗಿದೆ ಎಂಬುದನ್ನು ಗುರುತಿಸಿದ್ದಾರೆ. ಈಕೆಯ ಅಂಕಿತ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬುದು.

ಬಹುತೇಕ ವಚನಕಾರ್ತಿಯರಂತೆ ಈಕೆಯ ವಚನದ ಮೂಲದ್ರವ್ಯವೂ ವ್ರತನಿಷ್ಠೆ. ತನಗೆ ಚಿರಪರಿಚಿತವಾದ ಲೋಕಬಳಕೆಯ ವಸ್ತು ವಿಚಾರಗಳನ್ನೆತ್ತಿಕೊಂಡು ವಿಚಾರವನ್ನು ಪ್ರಸ್ತುತಪಡಿಸುವ ಅಕ್ಕಮ್ಮನ ಚಿಂತನೆಗಳು ಮಾಹೇಶ್ವರ ಸ್ಥಲದ ನಿಲುವನ್ನು ಸೂಚಿಸುತ್ತವೆನ್ನುವುದು ಲೇಖಕರ ಅಭಿಪ್ರಾಯ. ಅಕ್ಕಮ್ಮನ ವ್ರತನಿಷ್ಠೆಯನ್ನು ಕುರಿತಾದ ಎರಡು ವಚನಗಳನ್ನು ಆರಿಸಿಕೊಂಡು ಅದರ ಸಾರಸರ್ವಸ್ವವನ್ನು ವಿಶ್ಲೇಷಿಸುತ್ತ ಈ ಎರಡು ವಚನಗಳಲ್ಲಿ ಭಿನ್ನ ವ್ಯಾಖ್ಯಾನವನ್ನು ನೀಡುವುದರ ಮೂಲಕ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಇಲ್ಲಿನ ಸ್ವಾರಸ್ಯವಾದ ಸಂಗತಿಯೆನ್ನುತ್ತಾರೆ. ಅಕ್ಕಮ್ಮನ ನಿರೂಪಣಾ ವಿಧಾನ, ಚಿರಪರಿಚಿತವಾದ ಶಬ್ಧಗಳ ಬಳಕೆ ಎಂಥವರ ಮನಸ್ಸನ್ನೂ ಆಕರ್ಷಿಸುತ್ತವೆ ಎಂದು ಅಭಿಪ್ರಾಯಿಸುವ ಲೇಖಕರು ಸಮಾಜ ನೈತಿಕತೆಯತ್ತ ಸರಿಯಬೇಕೆಂಬುದರ ಸೂಚನೆ ಇಲ್ಲಿ ಅಂತರ್ಗತವಾಗಿದೆ ಎಂದಿರುವುದು ಸಮಂಜಸವಾಗಿದೆ.

**ವಚನಕಾರರ ಸಾಹಿತ್ಯಕ ಚಿಂತನ**

ಶಿವಭಕ್ತಿಯ ಬುನಾದಿಯಲ್ಲಿ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಬದುಕನ್ನು ಸರ್ವಸಮಾನತಾ ದೃಷ್ಟಿಯಿಂದ ಮುರಿದು ಕಟ್ಟಿ ಹಸನುಗೊಳಿಸಲು ಹನ್ನೆರಡನೆಯ ಶತಮಾನದ ಕ್ರಾಂತಿಕಾರೀ ಪ್ರಗತಿಪರ ಚಿಂತಕರು ಮನಸ್ಸು ಮಾಡಿದುದರ ಪರಿಣಾಮವಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿತು. ಈ ವಚನಕಾರರು ವರ್ಗ, ವರ್ಣ, ಲಿಂಗಭೇದವನ್ನು ತೊಡೆದು ಸಮಾಜದಲ್ಲಿ ರೂಢಮೂಲವಾಗಿದ್ದ ಸಂಪ್ರದಾಯ ಶರಣತೆ, ಅಂಧಶ್ರದ್ಧೆ, ಅಜ್ಞಾನಗಳನ್ನು ಹೋಗಲಾಡಿಸಿ ಎಲ್ಲರನ್ನೂ ಒಂದೇ ಸೂರಿನಡಿಯಲ್ಲಿ ಸಮತ್ವದ ದೃಷ್ಟಿಯಿಂದ ಕಾಣುವ ಪ್ರಯತ್ನವನ್ನು ಮಾಡಿದುದು ಕರ್ನಾಟಕದ ಚರಿತ್ರೆಯಲ್ಲೇ ಅಪೂರ್ವವಾದುದು.

ಪ್ರಸ್ತುತ ಲೇಖನದಲ್ಲಿ ಪ್ರೊ.ಅಬ್ದುಲ್ ಬಷೀರ್ ಅವರು ಜಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯನ್ನು ತಿದ್ದುವ ಸಲುವಾಗಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ವಚನ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖ ವಚನಕಾರರು ಅಲ್ಲಮ ಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ ಮುಂತಾದವರ ತಾತ್ತ್ವಿಕ ಚಿಂತನೆ

ಮತ್ತು ಧಾರ್ಮಿಕ ಕಾರಣಗಳೊಂದಿಗೆ ಸಮರಸವಾಗಿ ಮಿಳಿತವಾದ ಸಾಹಿತ್ಯಕ ಚಿಂತನೆಗಳನ್ನು ಪರಿಶೋಧಿಸುತ್ತಾರೆ.

ವಚನಕಾರರು ಅದುವರೆಗಿನ ಸಾಹಿತ್ಯದ ಭಾಷೆ, ಭಾವ, ರೂಪ ಎಲ್ಲವನ್ನೂ ತಿರಸ್ಕರಿಸಿ ಜನಭಾಷೆಯನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಆರಿಸಿಕೊಂಡರು. ಆರಂಭದಲ್ಲಿ ಶಾಸ್ತ್ರವೆಂದೇ ಪರಿಗಣಿಸಲಾಗುತ್ತಿದ್ದ ವಚನಸಾಹಿತ್ಯದಲ್ಲಿ ದೇವರು, ಭಕ್ತಿ, ಜ್ಞಾನ ಮೊದಲಾದ ಆಧ್ಯಾತ್ಮಿಕ ವಿಚಾರಗಳೂ ನೀತಿ, ಸಮಾಜರಚನೆ ಮಹಿಳೆಯರು ಸ್ಥಾನಮಾನದಂಥ ಲೌಕಿಕ ಮತ್ತು ತಾತ್ತ್ವಿಕ ವಿಚಾರಗಳೂ ಕೂಡಿದ್ದುವೆನ್ನುವ ಲೇಖಕರು ವೇದೋಪನಿಷತ್ತುಗಳನ್ನು ಬಲ್ಲ ವಚನಕಾರರು ಸಾಮಾನ್ಯ ಜನರಿಗೆ ಅರ್ಥವಾಗದ ಸಂಸ್ಕೃತವನ್ನು ತಿರಸ್ಕರಿಸಿ ತಮ್ಮ ಭಾವನೆ, ವಿಚಾರಗಳನ್ನು ವಚನವೆಂಬ ಮುಕ್ತಕಗಳಲ್ಲಿ ಹಿಡಿದಿಟ್ಟರೆಂದೂ ಅದು ಆ ಕಾಲದ ಒಂದು ಅನಿವಾರ್ಯ ಪರಿಸ್ಥಿತಿಯಾಗಿತ್ತೆಂದೂ ತಿಳಿಸುತ್ತಾರೆ.

ಛಂದೋಬದ್ಧ ರಚನೆಗಳನ್ನು ಬಿಟ್ಟು ಸ್ವಚ್ಛಂದವಾದ ಮಾಧ್ಯಮದಲ್ಲಿ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಹರಿಯಗೊಟ್ಟ ವಚನಕಾರರು ತಾವು ಬರೆದುದನ್ನು ಜನರು ತಿಳಿಯಬೇಕೆಂಬ ಉದ್ದೇಶದಿಂದ ಪ್ರತಿ ವಚನದ ಕೊನೆಯಲ್ಲೂ ಅಂಕಿತವನ್ನು ಬಳಸಿದ್ದಾರೆನ್ನುತ್ತಾರೆ. ವಚನಕಾರರದು ಕವಿ ಹೃದಯವಾದುದರಿಂದ ಅವರು ಬರೆದುದು ಜನರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಲು ಸಾಧ್ಯವಾಯಿತೆನ್ನುತ್ತಾರೆ.

ವಚನಗಳಿಗೆ ಮೂಲ ಸ್ಫೂರ್ತಿ ಯಾವುದೆಂದು ಶೋಧಿಸುವ ಲೇಖಕರು ಅದಕ್ಕೆ ವಿದ್ವಾಂಸರು ಹೇಳುವ ಮೂರು ಕಾರಣಗಳನ್ನು ಮಂಡಿಸುತ್ತಾರೆ. ತಮಿಳಿನ ನಾಯನ್ಮಾರರ ತೇವಾರಂ ಹಾಡುಗಳು, ಸಂಸ್ಕೃತ ಛಂದೋಗಂಧಿಯಾದ ಗದ್ಯಪ್ರಕಾರದ ಸ್ತೋತ್ರಗಳು ಮತ್ತು ಕನ್ನಡದ ತ್ರಿಪದಿಗಳು.

ಶೋಷಣೆಯ ಸಂಕೇತವಾದ ವೈದಿಕ ಮತ, ಮತಗ್ರಂಥಗಳು, ಮೂರ್ತಿಪೂಜೆ, ದೇವಸ್ಥಾನಗಳನ್ನು ಅಲ್ಲಗಳೆದ ವಚನಕಾರರು ಸಂಸ್ಕೃತ ಭಾಷೆಯನ್ನೂ ತಿರಸ್ಕರಿಸಿ ಅಚ್ಚಗನ್ನಡದಲ್ಲಿ ಬರೆಯಲಾರಂಭಿಸಿದರೆಂದೂ ವಚನ ಚಳುವಳಿಯಲ್ಲಿ ಪಾಲ್ಗೊಂಡವರೆಲ್ಲರೂ ಬ್ರಾಹ್ಮಣೇತರರೆಂಬುದನ್ನೂ ಲೇಖಕರು ನಿರೂಪಿಸುತ್ತಾರೆ. ವಚನಕಾರರಿಗೆ ತಮ್ಮ ವಚನಗಳ ಕಾವ್ಯ ಸೌಂದರ್ಯಕ್ಕಿಂತ ಸಂವಹನ ವಾಹಕವಾಗಿ ಅವುಗಳನ್ನು ಜನಸಾಮಾನ್ಯರ ಬಳಿಗೆ ತಲುಪಿಸುವುದು ಮತ್ತು ಮನದಟ್ಟು ಮಾಡಿಸುವುದು ಉದ್ದೇಶವಾಗಿತ್ತೆಂದು ಹೇಳುವ ಲೇಖಕರು ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎನ್ನುವ ಸುಪ್ರಸಿದ್ಧ ವಚನವನ್ನು ಉಲ್ಲೇಖಿಸಿ, ವಿಶ್ಲೇಷಿಸಿ, ವಚನಕಾರರ ದೃಷ್ಟಿಯಲ್ಲಿ ಮಾತಿನ ಮಹತ್ವವೇನು ಎಂಬುದನ್ನು ಬಣ್ಣಿಸುತ್ತಾರೆ.

ಬಸವಣ್ಣ ಅವರ 'ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು. ವಾರಿಧಿ ಮೈದೆಗೆರೆ ರತ್ನಂಗಳು ಕಾಣಬಹುದು' ಎನ್ನುವ ಇನ್ನೊಂದು ವಚನದ ರೂಪಕಶಕ್ತಿಯನ್ನು ಕೊಂಡಾಡುತ್ತ ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೆ ಕಾಣಬಹುದು' ಎಂಬ ರೂಪಕ ವೀರಶೈವ ಸಾಹಿತ್ಯದ ಅನುಭಾವದ ಅಮೃತವಾಣಿಯ ಮೌಲ್ಯವನ್ನು ವರ್ಣಿಸುತ್ತದೆ ಎನ್ನುತ್ತಾರೆ.

ಕೆಲವು ವಚನಕಾರರು ಸಾಹಿತ್ಯ ನಿರ್ಮಿತಿಯ ಬಗೆಗೆ ಚಿಂತನೆ ನಡೆಸಿದ್ದರು ಎಂಬ ಅಂಶವನ್ನೂ ಶ್ರುತಪಡಿಸುತ್ತ ತಮ್ಮ ಅಭಿಪ್ರಾಯದ ಸಮರ್ಥನೆಗಾಗಿ ಬಸವಣ್ಣನವರ 'ವಚನದಲ್ಲಿ ನಾಮಾಮೃತ ತುಂಬಿ'... ಎಂಬ ವಚನವನ್ನು ಉದ್ಧರಿಸುವ ಲೇಖಕರು ರೂಪಕ ಬಳಕೆ, ಸರ್ವ ಸಮರ್ಪಣ ಭಾವ, ಪುನರುಕ್ತಿಯ ಸೊಗಸು, ಭಾವಗೀತೆಯಲ್ಲಿರಬೇಕಾದ ಸಂಕ್ಷೇಪ ಗುಣ, ಸ್ವಯಂಪೂರ್ಣತೆ, ಧ್ವನಿರಮ್ಯತೆಗಳಿಂದ ಕೂಡಿದ ಈ ವಚನ ಪ್ರತಿಭಾವಂತನ ಕಾವ್ಯಸೃಷ್ಟಿಯಂತಿದೆ ಎಂದು ಮೆಚ್ಚಿರುವುದು ಅರ್ಥಪೂರ್ಣವಾಗಿದೆ. ಬಸವಣ್ಣನವರ ಅನೇಕ ವಚನ ತುಣುಕುಗಳನ್ನು ಉಲ್ಲೇಖಿಸಿ ಅದರೊಳಗಿನ ಕಾವ್ಯಗುಣವನ್ನು ಕೊಂಡಾಡುವ ಲೇಖಕರು ಹಲವಾರು ಸಂದರ್ಭಗಳಲ್ಲಿ ಶರಣರು ಮಾತನಾಡಿದ್ದೆಲ್ಲವೂ ಕಾವ್ಯವಾಗಿದೆಯೆಂದೂ ವ್ಯಕ್ತಿಯ ಅಂತಃಕರಣ ತೀವ್ರವಾಗಿ ಮಿಡಿದಾಗಲೆಲ್ಲ ಹೀಗಾಗುವುದು ತರ ಸಹಜವೆಂದೂ ಹೇಳಿರುವುದು ಯಥಾರ್ಥವಾಗಿದೆ. ವಚನ ಸಾಹಿತ್ಯದ ಬಗೆಗಿನ ಲೇಖಕರ ಆಳವಾದ ಅಧ್ಯಯನ, ಬಸವಣ್ಣನವರ ಬಗೆಗಿನ ಅತಿಯಾದ ಗೌರವಾಭಿಮಾನಗಳು ಈ ಲೇಖನದಲ್ಲಿ ಬಹಳ ಸೊಗಸಾಗಿ ಅಭಿವ್ಯಕ್ತವಾಗಿವೆ.

## ಆಕರ ಗ್ರಂಥಗಳು


1. ಧರ್ಮಸಮನ್ವಯ ಸಾಹಿತ್ಯ ವಿಮರ್ಶೆ: ಪ್ರೊ.ಜಿ. ಅಬ್ದುಲ್ ಬಷೀರ್, ಕನ್ನಡ ಸಾಹಿತ್ಯ ಪರಿಷತ್ತು, 2018
2. ವಿಮರ್ಶೆಯ ಪರಿಭಾಷೆ: ಓ.ಎನ್.ನಾಗಭೂಷಣ ಸ್ವಾಮಿ, ಅಭಿನವ ಪ್ರಕಾಶನ, ಬೆಂಗಳೂರು, 2013
3. ಕಾವ್ಯರ್ಥ ಚಿಂತನ : ಡಾ.ಜಿ.ಎಸ್.ಶಿವರುದ್ರಪ್ಪ, ಶಾರದಾ ಪ್ರಕಾಶನ, ಬೆಂಗಳೂರು, 1983
4. ಭಾರತೀಯ ಕಾವ್ಯ ಮೀಮಾಂಸೆ ತತ್ತ್ವ ಮತ್ತು ಪ್ರಯೋಗ: ಡಾ.ಕೆ.ಕೃಷ್ಣಮೂರ್ತಿ, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು, 1971
5. ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ: ಡಾ.ಮಲ್ಲೇಪುರಂ, ಜಿ. ವೆಂಕಟೇಶ್, ತಳುಸಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು, 2000
6. ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು: ಡಾ.ರಂ.ಶ್ರೀ ಮುಗಳಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1969
7. ಭಾರತೀಯ ಕಾವ್ಯ ಮೀಮಾಂಸೆ: ತೀ.ನಂ.ಶ್ರೀಕಂಠಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1968
8. ಅಂತರಂಗದ ಪಯಣ: ಆಮೃತಾ ರಕ್ಷಿದಿ ಅಭಿರುಚಿ ಪ್ರಕಾಶನ, ಮೈಸೂರು, 2017
9. ಜನಪದ ಕಾವ್ಯ: ಡಾ.ಗಿರಿಡ್ಡಿ ಗೋವಿಂದ ರಾಜ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1971

**10.** ಬಸವೇಶ್ವರ ವಚನ ದೀಪಿಕೆ: ಡಾ.ಎಚ್. ತಿಪ್ಪೇರುದ್ರಸ್ವಾಮಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2013

**11.** ವಚನ ತವನಿಧಿ: ಡಾ.ಹೆಚ್. ಚಂದ್ರಶೇಖರ ಐಬಿಎಸ್ ಪ್ರಕಾಶನ, ಬೆಂಗಳೂರು, 2016

**12.** ಕದಂಬ: ಪ್ರೊ.ಎಂ. ವಿ.ಸೀತಾರಾಮಯ್ಯ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು, 1993

**13.** ತವನಿಧಿ: (ಸಂ) ಡಾ.ಸಿ.ವೀರಣ್ಣ ಗೊರುಚ ಅಭಿನಂದನ ಸಮಿತಿ, ಬೆಂಗಳೂರು, 2014

**14.** ಸಂಭಾವನೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1979

**15.** ಪಂಪ ಒಂದು ಮುನ್ನೋಟ: (ಸಂ) ಡಾ.ಸಿ.ಬಿ. ಹೊನ್ನು ಸಿದ್ಧಾರ್ಥ ಭಾರತಿ ವೃಂದ (ರಿ) ಹಾಗೂ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಬೆಂಗಳೂರು, 2017

**16.** ಸಹೃದಯ ಸ್ಪಂದನ: ಡಾ. ಪ್ರಮೀಳಾ, ಮಾಧವ್ ಕಾರ್ತಿಕ್ ಎಂಟರ್ ಪ್ರೈಸಸ್ ಬೆಂಗಳೂರು, 2010

**17.** ಬಸವಣ್ಣನವರ ವಚನ ಸಂಗ್ರಹ: ಪ್ರೊ.ಟಿ.ಆರ್. ಮಹಾದೇವಯ್ಯ ಡಾ.ಸಿ.ಎಂ. ಕುಂದಗೋಳ ಬಸವ ಸಮಿತಿ, ಬೆಂಗಳೂರು, 2011

**18.** ಶಾಸ್ತ್ರಸಾಹಿತ್ಯ ವಿಚಾರ: ಪ್ರೊ.ಪಿ. ಶ್ರೀಕೃಷ್ಣಭಟ್ ವಿದ್ಯಾಪ್ರಕಾಶನ, ಸರಗೋಡು, 2009

**19.** ಕನಕದಾಸಾವಲೋಕನ: ಡಾ. ದೇ.ಜವರೇಗೌಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012

**20.** ಶ್ರೀರಾಮದಾಸರ ಬದುಕು ಮತ್ತು ಸಾಹಿತ್ಯ: ಡಾ. ರಾಮರಾವ್ ಕುಲಕರ್ಣಿ ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ, ನಂಜನಗೂಡು, 2012

**21.** ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012

**22.** ಜನಪ್ರಿಯ ಕನಕ ಸಂಪುಟ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1989

**23.** ತತ್ವ ಪದಗಳು: ಶಾಂತರಸ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2000

**24.** ದಾಸ ಸಾಹಿತ್ಯದ ತವನಿಧಿಯಲ್ಲಿ: ಪ್ರೊ. ವಸಂತಕುಷ್ಟಗಿ ಶ್ರೀಬತ್ತೇರ ಪ್ರಕಾಶನ, ಗುಲಬರ್ಗಾ, 2012

**25.** ಸೂಫಿ ಮತ್ತು ಶರಣ ಪಥಗಳ ತೌಲನಿಕ ಅಧ್ಯಯನ: ಡಾ.ಅಬ್ದುಲ್ ಹಮೀದ್ ಪ್ರಿಯದರ್ಶಿನಿ ಪ್ರಕಾಶನ, 1998

**26.** ಸೋಮೇಶ್ವರ ಶತಕ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2007